ಸಂಗಮ ಪ್ರಕಾಶನ,
ಕಲ್ಲಡ್ಕ, ದ. ಕ.

ಮಕುಟೋರುಭಂಗಂ

(ಛಂದೋ ನಾಟಕಂ)

ಟಿ. ಜಿ. ಮುಡೂರು, ವಿದ್ವಾನ್.

ರನ್ನನ ಕಥಾವಸ್ತು–ರನ್ನನ ಪಾತ್ರಸೃಷ್ಟಿ–
ರನ್ನನ ನುಡಿಗಟ್ಟುಗಳಿಂ–
ಕಟ್ಟುವಡೆದಿಹುದು ಈ
'ಮಕುಟೋರುಭಂಗಂ'

ಸಂಗಮ ಪ್ರಕಾಶನ,
ಕಲ್ಮಡ್ಕ, ದ. ಕ.

ಪ್ರಥಮ ಮುದ್ರಣ 1959

ಬೆಲೆ: ಒಂದು ರೂಪಾಯಿ

ಮುದ್ರಕರು:

ಶ್ರೀಮಂಜುನಾಥ ಮುದ್ರಣಾಲಯ, ಬೆಳ್ತಂಗಡಿ, ದ. ಕ.

ಪ್ರಕಾಶಕರ ಮಾತು

'ಕಾವ್ಯೇಷು ನಾಟಕಂ ರಮ್ಯಂ' ಪದ್ಯ ಗದ್ಯ ಚಂಪೂಕಾವ್ಯ ಸಮುದಾಯದಲ್ಲಿ ನಾಟಕಕ್ಕಿರುವ ಸ್ಥಾನಮಾನ ಹಿರಿದು. ಕತೆ, ಕಾದಂಬರಿ, ಪ್ರಬಂಧ ಸಾಹಿತ್ಯಗಳನ್ನು ಇದುವರೆಗೆ ವಾಚಕರಿಗೆ ಒದಗಿಸಿಕೊಟ್ಟ ಸಂಗಮ ಪ್ರಕಾಶನವಿಂದು, ನಾಟಕ ಕೃತಿಯೊಂದನ್ನು ಬೆಳಕಿಗೆ ತರುವುದರಲ್ಲಿ ತನ್ನ ವೈವಿಧ್ಯಪೂರ್ಣ ಹೊಸ ಹೆಜ್ಜೆಯನ್ನಿಡುತ್ತಿದೆಯೆನ್ನಲು ಸಂತೋಷ ಪಡುವೆವು. ಈ ನಮ್ಮ ಯತ್ನವು ಪ್ರಬುದ್ಧ ವಾಚಕ–ನಾಟಕ–ಸಾಹಿತ್ಯ ಪ್ರಿಯರಿಗೆ ಮೆಚ್ಚುಗೆಯಾಗಬಹುದೆಂದು ನೆನೆದು, ಲೇಖಕ–ಮುದ್ರಕರ ಉಪಕಾರವನ್ನು ಸ್ಮರಿಸುವೆವು.

ಸಂಗಮ ಕಲಾ ಸಂಘ,
ಕಲ್ಮಡ್ಕ, ದ. ಕ.
1–1–'59

ಪಿ. ಜಿ. ಭಟ್,
ಕಾರ್ಯದರ್ಶಿ

ಮುನ್ನುಡಿ

ಕವಿಚಕ್ರವರ್ತಿಯಾದ ರನ್ನನ 'ಸಾಹಸ ಭೀಮ ವಿಜಯ' ಅಥವಾ 'ಗದಾಯುದ್ಧ'ವು ಕನ್ನಡ ಸಾಹಿತ್ಯದಲ್ಲೊಂದು ಅಮೂಲ್ಯ ರಸಘಟ್ಟಿ. ಗದಾಯುದ್ಧವು ಹೇಗೆ ಒಂದು ಉತ್ತಮ ಚಂಪೂ ಕಾವ್ಯವಾಗಿದೆಯೋ ಅಂತೆಯೇ ಅದೊಂದು ಉತ್ತಮ ನಾಟಕವೂ ಆಗಿದೆ. ದುಃಖಾಂತ ನಾಟಕವಾಗಿದೆ. ಕಾವ್ಯದಲ್ಲಿ ನಾಟಕಕ್ಕೆ ಬೇಕಾಗುವ ಮೂರ್ತಿವತ್ತಾದ ಪಾತ್ರ ಸೃಷ್ಟಿ– ಸಂಭಾಷಣೆ– ಕ್ರಿಯೆ - ರಾಗೋದ್ರೇಕ ರಸಪುಷ್ಟಿ– ಸನ್ನಿವೇಶಗಳಿರುವುದೇ ಇದಕ್ಕೆ ಕಾರಣವಾಗಿದೆ. ಇದಕ್ಕೆ ಸಾಕ್ಷಿಯಾಗಿ ರನ್ನನ ಪದ್ಯ ವೃತ್ತಗಳನ್ನೇ ಬಳಸಿಕೊಂಡ ದಿ। ಬಿ. ಯಂ. ಶ್ರೀ. ಅವರಿಂದ 'ಗದಾ ಯುದ್ಧ ನಾಟಕಂ' ಈ ಹಿಂದೆಯೇ ರಚನೆಗೊಂಡು ಜನಾದರಣೀಯವಾಗಿರುವುದು.

'ಮಕುಟೋರುಭಂಗಂ' ಇದೇ ದಾರಿಯಲ್ಲಿಟ್ಟಿರುವ ಒಂದು ಅಂಬೆಗಾಲು. ರನ್ನನ ಕಥಾವಸ್ತುವನ್ನು ಬಿಡದೆ ಆತನ ಪಾತ್ರ ಚಿತ್ರಣವನ್ನು ಕೆಡಿಸದೆ ಆತನ ನುಡಿಗಟ್ಟುಗಳನ್ನು ಸಾಧ್ಯವಿದ್ದಷ್ಟು ಬಳಸಿಕೊಂಡು ಛಂದಸ್ಸಿನಲ್ಲಿ ಮಾತ್ರ ಸ್ವಾತಂತ್ರ್ಯವನ್ನು ವಹಿಸಿಕೊಂಡು ಈ ಕಾಲಕ್ಕೊಪ್ಪಿಗೆಯಾಗಬಹುದಾದ ಸರಳ ರಗಳೆಯಲ್ಲಿ ನಾಟಕವಿದನ್ನು ಬರೆದಿರುವೆನು.

ಏಳು ದೃಶ್ಯಗಳನ್ನೊಳಗೊಂಡ ಈ ನಾಟಕವು ಕಥಾ ನಾಯಕನಾದ ಭೀಮನು ಜಯದೊಸಗೆಗಾಗಿ ತನ್ನ ಗದಾದಂಡವನ್ನು ಪೂಜಿಸುವ ಸಂಭ್ರಮದಲ್ಲಿ ಆರಂಭವಾಗಿ ಶ್ರೀಕೃಷ್ಣ ಹಾಗೂ ಪಾಂಡವರೆಲ್ಲರೂ ಜಯದೊಸಗೆಯಿಂದ ಭೀಮಗದೆಯನ್ನು ಪೂಜಿಸುವ ಸನ್ನಾಹದಲ್ಲಿ ಅಂತ್ಯವಾಗುವುದು.

ನಾಟಕವಿದರಲ್ಲಿ ಭಾರತಸಂಗರಾಧ್ವರಕ್ಕೆ ಕರಗವೊತ್ತಿಹ ಅಗ್ನಿಜೆಯನ್ನು ಪ್ರತ್ಯಕ್ಷವಾಗಿ ರಂಗಕ್ಕೆ ತಂದಿಲ್ಲ. ಹದಿಬದೆಯ ಪರಿಭವಕೆ ಮನನೊಂದ ಆಕೆ ಸಂತಾಪ ಸಂದೇಹದೊಳಗುಂದಿ ಮರೆಯಲ್ಲೇ ನವೆಯುತ್ತಿದ್ದು ವೇಣಿಸಂಹಾರಕಲ್ಲದೆಯೆ ಜಗಕೆ ಮೊಗದೋರೆನೆಂದ ಸ್ಥಿತ ಪ್ರತಿಜ್ಞೆ. ಕುರುಕುಲನ ಮಕುಟೋರುಭಂಗಮಂ ಮಾಡುತೊಡ ಭೀಮ ಪೂಣ್ಕೆಯ ತೀರಿಸಲ್ ಕರೆಯೆ ಬರುವವಳು. ಮೊದಲನೆಯ ಮತ್ತು ಕೊನೆಯ ದೃಶ್ಯಗಳಲ್ಲಿ ಭೀಮ ಕೃಷ್ಣರು ಆಕೆಯನ್ನುದ್ದೇಶಿಸಿ ರಂಗದಿಂದಲೇ ಆಕೆಯೊಡನೆ ಸಂಬೋಧಿಸುವರು. ಇದ

ರಿಂದ ದ್ರೌಪದಿಯು ಪ್ರೇಕ್ಷಕರ ಕಣ್ಣೆದಿರು ಬಂದು ನಿಲ್ಲದಿದ್ದರೂ ಮನದ ಎದುರು ನಿಂತಿರುತ್ತಾಳೆ.

ರನ್ನನ ನುಡಿಗಟ್ಟುಗಳನ್ನು ಹೆಚ್ಚಾಗಿ ಬಳಸಿಕೊಂಡ ಇದನ್ನೇಕೆ ಬರೆಯ ಬೇಕು? ಉದ್ದೇಶವೇನು? ಆದರಲ್ಲಿ ಸ್ವಪ್ರತಿಭೆಯೇನಿದೆಯೆನ್ನುವ ಪ್ರಶ್ನೆ ಗಳು ಮೂಡುವುದು ಸಹಜ. ರನ್ನನು ಗದಾಯುದ್ಧವನ್ನೇಕೆ ಬರೆದನು? ಪಂಪ ಭಾರತದ ಹದಿಮೂರನೇ ಆಶ್ವಾಸದಲ್ಲಿ ಬರುವ ಗದಾಯುದ್ಧ ಪ್ರಸಂಗವೇ ಕನ್ನಡ ಸಾಹಿತ್ಯಕ್ಕೆ ಸಾಕಾಗುತ್ತಿರಲಿಲ್ಲವೇ? ಎಂಬುದು ಇದಕ್ಕೆ ವಿನಯಪೂರ್ವಕ ಉತ್ತರ. ಗದಾಯುದ್ಧ ಕಾವ್ಯವನ್ನು ಮೊದಲಾಗಿ ಓದಿ ಅರ್ಥ ಮಾಡಿಕೊಳ್ಳಲು ಕಷ್ಟಸಾಧ್ಯರಾದ ಎಳೆಯ ಸಾಹಿತ್ಯಾಭ್ಯಾಸಿಗಳಿಗೆ ಛಂದಸ್ಸಿನ ಹೊಸಯುಡಿಗೆಯುಟ್ಟಿಹ ನಾಟಕವಿದು ಮೊದಲ ಮೆಟ್ಟಲಾಗ ಬಹುದು. ಕಂದ ವೃತ್ತಗಳನ್ನೊಳಗೊಂಡ ನಾಟಕವನ್ನು ಪ್ರಯೋಗಿಸುವು ದಕ್ಕಿಂತ ಸುಲಭವಾಗಿ ಛಂದೋನಾಟಕವಿದನ್ನು ರಂಗ ಪ್ರಯೋಗ ಮಾಡ ಬಹುದು. ಈ ಸಣ್ಣ ಉದ್ದೇಶಗಳು ಇದರಲ್ಲಿರಬಹುದು. ಪ್ರತಿಭೆಗೆ ಕೃತಿಯೇ ಸಾಕ್ಷಿಯಾಗಿ ಕವಿಯ ಪರವಾಗಿ ಉತ್ತರವೀಯಬೇಕು.

ಕೃತಿಯ ಅರ್ಹತೆಯನ್ನು ವಿವೇಚಿಸುವ ಸಾಹಿತ್ಯ ಸಹೃದಯರುಗಳ ಕೈಗೆ ಕೃತಿಯನ್ನಿಡುವ ಮೊದಲು ಛಂದೋ-ನಾಟಕವೊಂದನ್ನು ನನ್ನಲ್ಲಿ ಬರೆಯ ಬೇಕೆಂದು ಪ್ರೇರೇಪಿಸಿದ, ನನ್ನ ನಾಟಕಗಳನ್ನು ಉತ್ಸಾಹದಿಂದ ಆಡಿ ತೋರಿ ಸಲು ಸಿದ್ಧರಾಗುವ ವಿದ್ಯಾರ್ಥಿವೃಂದಕ್ಕೆ, ನಾಟಕವಿದನ್ನು ಬರೆಯುತ್ತಿದ್ದಂತೆ ಅಲ್ಲಲ್ಲಿ ಓದಿ ನೋಡಿ ಪ್ರೋತ್ಸಾಹ ಸಲಹೆಗಳನ್ನಿತ್ತ ಸಹೋದ್ಯೋಗಿಗಳಿಗೆ–ನನ್ನ ಬರಹಗಳಲ್ಲಿ ಅಭಿರುಚಿಯನ್ನು ತೋರಿಸುವ ಆತ್ಮೀಯ ಗೆಳೆಯರ ಬಳ ಗಕ್ಕೆ, ಪುಸ್ತಕವು ಅಂದವಾಗುವಂತೆ ಮುದ್ರಣಕಾರ್ಯದಲ್ಲಿ ಆಸಕ್ತಿ ವಹಿಸಿದ ಮುದ್ರಕರಿಗೆ– ನಾಟಕವಿದನ್ನು ಬೆಳಕಿಗೆ ತಂದ ಪ್ರಕಾಶಕರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನರ್ಪಿಸುವೆನು.

ಟಿ. ಜಿ. ಮುಡೂರು.

ಪಾತ್ರವರ್ಗ :—

ಭೀಮ

ಕೌರವ

ಕೃಷ್ಣ

ಸಂಜಯ

ಧರ್ಮರಾಯ

ಅರ್ಜುನ

ನಕುಲ

ಸಹದೇವ

ಧೃತರಾಷ್ಟ್ರ

ಗಾಂಧಾರಿ

ಭೀಷ್ಮ

ಬಲರಾಮ.

ಮರುಳುಗಳು (ಮೂರು)

ಮುಕುಟೋರುಭಂಗಂ

ದೃಶ್ಯ ೧

(ಪಾಂಡವರ ಶಿಬಿರ— ಉದ್ವಿಗ್ನತಾಮೂರ್ತಿ ಭೀಮಸೇನನು ತನ್ನ ಗದಾ ದಂಡವನ್ನು ತೂಗಿ ನೋಡುತ್ತ)

ಭೀಮ:— ಮಸಗು ಮಸಗೆಲೆ! ಭೀಮ ನಿಜ ಭುಜಗದಾದಂಡ!
ಜಯದೊಸಗೆಯಿಂ ನಿನ್ನ ಪೂಜಿಸುವೆ ದೋರ್ದಂಡ!
ಹದಿಬದೆಯ ಪರಿಭವ ಪ್ರತೀಕಾರಮಂ ಬಗೆದು
ಪಣ ತೊಟ್ಟ ಪಾಂಚಾಲಿ ನಿನ್ನ ನೆರವಂ ಕಾದು
ಕುಳಿತಿಹಳ್—ಸಜ್ಜಾಗಿರೆಯ್ ಎನ್ನ ಭೀಮಗದೆ!
ಕುಹಕಿ ಕುರುಕುಲ ಸುಯೋಧನನೂರು ಭಂಗಮಂ
ಮುಕುಟ ಮರ್ದನ ಮಾಡುವನ್ನೆಗಂ ನಿನಗಿಲ್ಲ
ವಿಶ್ರಾಂತಿ—ಕೌರವಾನುಜ ತನುಜ ಮಾರ್ಬಲವ
ಕುರುಧರೆಗೆ ಕೆಡಹಿ ಪೊಡೆದಿಹ ನಿನ್ನ ನಿಜ ಬಲಕೆ
ಒಲಿದು ಕಣ್ಣಿಟ್ಟಿಹಳ್ ಜಯವಧುವು—ಮೇಣಂತೆ
ಕುರುಕುಲನ ರಾಜ್ಯವಧು—ಇಂತಿರಲ್ ಭಾರತದ
ಕಳೆದ ಪದಿನೇಳ್ದಿನದ ಕದನದೊಳ್ ಕುರುಬಲವ
ನುಳಿದ ಕೌರವನಿಹನ್ ಏಕಾಂಗಿ – ಈ ಪೊಳ್ತು
ಮುಕುಟೋರುಭಂಗಮಿದು – ಇಂತು ಭೀಮನ ಪೂಣ್ಕೆ
ಪರಿಭವಕೆ ಮನ ನೊಂದ ಕುರುಕುಲಪ್ರಳಯಾಗ್ನಿ
ಅಗ್ನಿಜೆಯು ಕುಳಿತಿಹಳ್ ಕುರುಧರೆಯ ಕಾಳಗಕೆ
ಕರಗವೊತ್ತಿಹ ಚಂಡಿ! ಸಂತಾಪ ಸಂದೇಹ
ದೊಳಗುಂದಿ ನಮೆದಪಳ್ ಮರೆಯೊಳಗೆ........

(ತೆರೆಯ ಕಡೆ ನೋಡಿ)

ಏನ್ ಕೃಷ್ಣೆ!

ಸಂಧಿಗೊಡಂಬಟ್ಟಪರ್ ಎಮ್ಮವರ್ ಎಂದಪೆಯಾ?
ನೆನೆಯದಿರ್ – ಧರ್ಮನಂದನ ಪಾರ್ಥಯಮಳರೊಡ
ಗೂಡಿ ಮುರವೈರಿ ಮಾಡಲ್ ಮರಳಿ ಸಂಧಿಯಂ
ಮುರಿಯುವೆನ್—ಸಂಧಿಯಾಗಲ್ ಬಿಡೆನ್—ದ್ರುಪದಜೆಯ
ಕೇಶಾಂಬರಾಕೃಷ್ಟಿ ದುಶ್ಯಾಸನುರವಸುಗಿ
ದಿಹೆನಂತೆ ಕುಹಕ ಜೂಜಿನ ಕೌರವನ ತೊಡೆಯು
ನುಡಿಯುಲೇನ್ ತಡೆದಪೆನೆ? ತೊಟ್ಟ ಪಣಮಂ ತೀರ್ಚಿ
ಬಿಟ್ಟ ನಿಡುಗೂದಲಿನ ನಿನ್ನ ಮುಡಿಯಂ ಕಟ್ಟಿ
ಸಲ್ಕುಳಿಯೆ ಹರಿಹರರ್ ಬ್ರಹ್ಮರಡ್ಡಯಿಸೆ ದಿಟ!
ಸಟ್ಟುರಿಸುವೆನ್ ಪಗೆಯು—ಮರುಗದಿರ್ ಪಾಂಚಾಲೆ!

ಕೃಷ್ಣ:— (ನಗುತ್ತ ಪ್ರವೇಶಿಸಿ)
ಏನ್ ಭೀಮ! ವೈರಿಬಲಮಂ ಗೆಲುವ ಸಾಹಸಂ--
ಅಟ್ಟಹಾಸದೆ ನುಡಿದು ದ್ರುಪದಜೆಯ ಕಿವಿದುಂಬಿ
ಸುವ ಕಜ್ಜದೊಳ್ ತೊಡಗಿ ಕದನ ಮಧ್ಯದೆ ನೀನ್
ಪೆರತೋರ್ವನುತ್ತರಕುಮಾರನಾಗಲ್ ಬಗೆವಾ?

ಭೀಮ:— ಮಾಣ್ ಕೃಷ್ಣ! ಪರಿಹಾಸಮಿದು ಸಾಲ್ಗು—ಸರಸಕಿದು
ಸಮಯಮಿಹುದಲ್ಲ—ಎನ್ನೆದೆಯುರಿಯ ಗಾಯದೊಳ್
ನಗೆಯು ಪನಿಯೆರಚದಿರ್—ಪೆಣ್ಣೆದೆಯ ಸಂತಯಿಪ
ಕಜ್ಜದೊಳಗಾನಿರ್ದೆ—ಮರೆತೆನಿಲ್ಲಂ ಕದನ
ದುಜ್ಜುಗವ—ನಿನ್ನಂತೆ ಗೋಪಾಲನೆಯ ಮರೆತು
ಗೋಪಾಂಗನಾವೃತದಿ ಮುರಲಿ ನಾದವ ಗೆಯ್ವ
ಸ್ತ್ರೀಲಂಪಟನ್ ಅಲ್ತು--ಕದನಮುಖದುತ್ತರೋ
ತ್ತರ ವಿಜಯ—ಜಯವಧುವಿನಾಲಿಂಗನಾಲಿಪ್ತ
ಮುತ್ಭುಜಗದಾದಂಡಕಿದಿರಾಂಪ ಗಂಡರಾರ್?

ಕೃಷ್ಣ:— ಏನ್ ದುಗುಡದೊಳಗಗ್ನಿಜಾತೆಯಿಹಳೆನ್ನನುಜೆ
ಬಾ ತಂಗೆ! ಪೊರಗೆ ಬಾ! ದುಗುಡಮೇಸದನರುಹು

ಭೀಮ:-- ಕುರುಕುಲನ ಮಕುಟೋರುಭಂಗಮಂ ಮಾಡುತೊಡ
ಭೀಮಪೂಣ್ಕೆಯ ತೀರಿಸಲ್ ಕರೆಯೆ ಬಂದಪಳ್
ಬರಿದೆ ಬಾರಳ್ - ವೇಣಿ ಸಂಹಾರಕಲ್ಲದೆಯೆ
ಜಗಕೆ ಮೊಗ ತೋರೆನೆಂದಳ್ - ಜತೆಗೆ ಎಮ್ಮವರ್
ಮರಳಿ ಸಂಧಿಗೆ ಮನಂ ಮಾಡಿಹರ್ ಎಂದಿಂತು
ಮನಗುಂದಿಹಳ್

ಕೃಷ್ಣ:-- ಅಬಲೆಯಿಂತೆರದೊಳಳಲುವುದು
ಪಿರಿದಲ್ತು—ಪಾಂಡುಜರ ಕೆಯ್ವಿಡಿದ ಬಳಿಕೆಲ್ಲಿ
ಸೊಗವಿಂಕೆಯುಂಡಿಹಳ್? ಪಾಂಚಾಲಿ! ಸಂದೇಹ
ಕೊಳಗಾಗದಿರ್ ತಂಗೆ! ನಾನ್ ಮುನ್ನ ಸಂಧಿಗೆಯ್
ದುವ ಕಾಲದೊಳ್ ನುಡಿದ ನುಡಿಯ ನೆನೆ-- ಸಾರಿ ಕೊಲು
ವುದು ರಾಜಧರ್ಮವಿದು— ಸಂಧಿಯಂ ಸಮರ ನಾಂ
ದಿಯದೆಂದು ಮರೆಯದಿರ್---ಗಾಂಗೇಯನಭಿಮತದಿ
ಧೃತರಾಷ್ಟ್ರ ಗಾಂಧಾರಿ ಕುರುಬಲದೊಳುಳಿದಿರ್ಪ
ದುರ್ಯೋಧನನ ಕೂಡೆ ಪಾಂಡುಜರ್ ಸಂಧಿಯೊಳ್
ಪುದುವಾಳವೇಕೆಂದು ನುಡಿದು ಅರಸಂವನಗೆ
ಜನವನಟ್ಟಲ್ ಧರ್ಮನಂದನನ್ ಇದಕೊಪ್ಪಿ........

ಭೀಮ:-- (ನಡುವೆ ಗಜರಿ)
ಏನ್? ಅಣ್ಣನಿದಕೊಪ್ಪಿಹನೆ! ಪಾರ್ಥಯಮಳರಿರೆ
ನಿನಗೊಪ್ಪಿಗೆಯೆ ಕೃಷ್ಣ? ಪಂಚ ಪಾಂಡವರೊಳಗೆ
ನಾನೊರ್ವ ಪೆರತಾದೆ — ಎಂತು ತೀರ್ಚುವೆ ಪೂಣ್ಕೆ ?
ಪೊಳ್ಳಾಗದೆನ್ನಾಣೆ....

ಕೃಷ್ಣ:— (ಸಂತೈಸಿ)
ಗಜರದಿರ್ ವಾಯುಜನೆ
ಎನಗೆ ನಂಬುಗೆಯಿಹುದು —ಅರಸುತನ್ ಸಮ್ಮತಿಸಿ
ಪುದುವಾಳಲೊಪ್ಪಿದರು ಅಭಿಮಾನಧನ ಸುಯೋ
ಧನನೊಪ್ಪನಿದಕೆನಿತು--

ಭೀಮ:— ಕುರುಕುಲನ ಪೊಗಳ್ದಿಮ್ಮ
ಕಿರಿಯ ಮಾಳ್ಪಿಯ್ ಕೃಷ್ಣ!

ಕೃಷ್ಣ:— ಗುಣಕೆ ಮತ್ಸರಮುಂಟೆ?
ಛಲದಂಕ ಕುರುಕುಲನ ಗೆಲುವರಿಲ್ಲೀ ಜಗದಿ—
ಇಂದಿನೀ ಸೂರ್ಯಾಸ್ತದೊಳಗವನ ಕೆಯ್‌ಗೆ ಮಾ
ಡಲ್ ನಿನಗೆ ಜಯಮಪ್ಪುದು—ಅಲ್ಲದೊಡೆ ದುರ್ಜೇಯ
ನಿಪನವನ್—ಈ ಪೊಳ್ತು ಶಲ್ಯರಳಿವಿನ ದುಗುಡ
ಮಂ ಪೊತ್ತು ಯುದ್ಧಮುಖನಾಗಿ ತಾನ್ ಸಾಗಿಹನ್
ಪದಿನೆಂಟು ದಿನದ ಭಾರತ ಕದನದಲಿ ಕೊನೆಯ
ದಿನವಿಂದು—ಅದರೊಳಂ ಅರೆದಿನಂ ಕರಗಿಹುದು
ಉಳಿದರ್ಧವದರೊಳೀ ಭೀಮ ನೀನ್ ಸ್ಥಿರತೆಯೊಳ್
ಸತ್ಯಪ್ರತಿಜ್ಞೆಯಂ ತೀರ್ಚು — ಕುರುಕುಲ ವಿಲಯ
ಕೇತುವಂ ಅಳಿಸುವೊಡೆ ತಡೆಯದಿರ್ — ಗಾಂಢೀವಿ
ಗಿನ್ನಿಲ್ಲ ಕಜ್ಜ — ಉದ್ದಾಮ ಸಾಹಸ ಭೀಮ
ಭೀಮಗದೆಗೀ ಪರ್ವಮೀದಿನಂ........

ಭೀಮ:— ಸಂಪ್ರಾಪ್ತ
ಗೊಳಲಿರ್ಪ ಕುರುಭೂಮಿಯೊಳ್ ಗದಾಯುದ್ಧದಿಂ
ಕುರುಕುಲನ ತೊಡೆಯನುಡಿವೆನ್ — ಮಕುಟವೊದೆಯುವೆನ್
ಪೂಣ್ದ ಪೂಣ್ಕೆಯ ತೀರ್ಚಿ ಸಂತವಿಡುವೆನ್ ಶೋಕ
ದಗ್ಧ ಹೃದಯಾನಲಜೆಯಾ ವೇಣಿ ಸಂಹಾರ
ಮಂ ಗೆಯ್‌ವೆ — (ತೆರೆಯ ಕಡೆ ನೋಡಿ)
ಸಂತವಿಡುವೆನ್ ನಿನ್ನ ದ್ರೌಪದಿಯೆ!
ಸಿದ್ಧವಿರ್ — ಪೊರಟೆನಿದೊ! ಪೊತ್ತಳಿಯುತಿದೆ — ಎಲ್ಲಿ
ಪಾಂಡುಜರ ಪುಟ್ಟುಪಗೆ? ಎಲ್ಲಿರ್ಪನ್ ಕುಹಕಿ!
(ರಭಸದಿಂದ ತೆರಳುವನು)

ಕೃಷ್ಣ:— (ತೆರೆಯ ಕಡೆಗೆ ನೋಡಿ)

ವೈರಿಯುನ್ ಪೊಗಳಿರ್ಪನೆಂದು ಮನ ಶಂಕಿಸಲ್
ಬೇಡ ನೀನ್ ತಂಗೆ!   ಮಾರುತ್ರಸುತನಯೊದೆಕೋಪ
ದಳ್ಳುರಿಸೆ ನುಡಿವೆನಿದ – ಅಭಿಮಾನಿ ಕುರುಪತಿಯು
ಛಲದಂಕನಾದೊಡೆಯು ಹದಿಬದೆಯ ಮಾನಾಪ
ಹಾರವೆಸಗಲಧರ್ಮಿಯವನ ಪೊರುವಳೆ ಧರೆಯು?
ಮರೆಯದಿರ್ – ಪದಿನೆಂಟು ದಿನದ ಭಾರತ ಕದನ
ಹದಿಬದೆಯ ಮಾನಾಪಹಾರ ಕಾರಣಕಾಯ್ತು!
ನೀನಗ್ನಿಪುತ್ರಿ ನಿನ್ನಿನಿಯನಿಹ ವಾಯುಜನ್!
ಅನಲಾನಿಲಾಯೋಗಮುರಿಸದಿರ್ಕುಮೆ ಪಗೆಯ?
ನಿನಗಾನು ನುಡಿದಂತೆ ನಿನ್ನವರ ಗೆಲುವಿಂಗೆ
ಮನಮಿಡುವೆ – ಅಡಿಯಿಡುವೆನಿದೊ ವಾಯುಜನ ರಕ್ಷೆ
ಗಿಂತಿರಲ್ – ಬೆದರದಿರ್ ತಂಗೆ!   ನಾನ್ ಬಂದಪೆನ್

(ತೆರಳುವನು)

— ತೆರೆ —

ದೃಶ್ಯ ೨

[ಸ್ಮಶಾನ ಕುರುಕ್ಷೇತ್ರ. ಹೆಗಲಗದೆಯನ್ನಿಟ್ಟುಕೊಂಡಿರುವ ಕೌರವನು ಪ್ರವೇಶಿಸುವನು. ಮ್ಲಾನವದನದಿಂದ ಸಂಜಯನೂ ಅವನನ್ನು ಅನುಸರಿಸುತ್ತಿರುವನು.]

ಸಂಜಯ:— (ಆತ್ಮಗತ)

ಓ ವಿಧಿಯೆ! ನಿಷ್ಕರುಣೆ! ನಿನ್ನದೇಂ ಮಾಟವಿದು?
ಧವಳಗಜ ಧವಳಾತಪತ್ರ ಚಾಮರ ಧವಳ!
ಧವಳಿಸಲ್ ಕೀರ್ತಿಯದು ವಂದಿ ಮಾಗಧರೊಡನೆ
ಧವಳಗೇಯದಿನೊಪ್ಪಿ ಬಪ್ಪ ಧವಳಿಗ ನೃಪನ
ದೇಸಿಗನ ತೆರದೊಳೀ ಕುರುಭೂಮಿಯೊಳ್ ನಡೆವ
ಸ್ಥಿತಿಯೊಳಿಳಿತಂದೆಯಾ! ಕಷ್ಟವಿದು!
(ಪ್ರಕಾಶವಾಗಿ)
ಓ ದೊರೆಯೆ!
ಹಲವಂಕುಶದ ಮೊನೆಗಳುಡಿದ ಕುರುಭೂಮಿಯಿದು
ಪಾದಕ್ಷತವಾಗದೊಲು ಕಾಲಿಡಯ್ ಕುರುಪತಿಯೆ
ಕಮಲಾಯಮಾನವಿಹ ನಿನ್ನ ಮೆಲ್ಲಡಿ ಭಿಂದಿ
ಪಾಳ ಕರವಾಳದಂಬಿನ ಕೊಂತ ಧಾರೆಗಳಿ
ಗುರ್ಚಿ ನೋಯುಗುಮೆತ್ತೆ....!

ಕೌರವ:— ನೋಯದಿರ್–

ಎನ್ನ ದುಸ್ಥಿತಿಗಿಂತು ಮರುಗದಿರ್ ಸಂಜಯನೆ!
ಬಂಧು ಬಾಂಧವ ಕೆಳೆಯ ತನುಜಾನುಜರ್ ಪಿರಿಯ
ಗುರುಜನರ್ ಆಹವದೊಳಿಳಿದಿರಲ್ ಮನಕ್ಷತವ
ಸೈರಿಸುವ ಎನ್ನೆದೆಗೆ ಈ ಪಾದಕ್ಷತವೇನು
ದೊಡ್ಡಿತಿದೆ! ಎನ್ನ ದೌರ್ಭಾಗ್ಯವಿದು........

ಸಂಜಯ:— ಕುರುಪತಿಯೆ!

ನಿರ್ಭಾಗ್ಯರಿರ್ಪೆವಾವು – ದೇವನೀಂ ಪ್ರತಿಕೂಲ

ದೈವಸಿಹೆ – ಪಾಂಡುಜರ್ ಅನುಕೂಲ ದೈವರಯ್!
ಇಂತಿರಲು ಕದನದೊಳ್ ಸೋಲೆಮಗೆ – ಮುಂದಿಂತು....

ಕೌರವ:— ನುಡಿಯದಿರ್ ಸಂಜಯಾ! ರಣಕಣವನುತ್ತರಿಸಿ
ಜಡನ ಸೇರಲ್ ಬಗೆಯುವೆನ್ನನೀಯೆಡೆಯೊಳಗೆ
ತಡೆಯದಿರ್ – ಸಮರ ಜಯ ಬಿದಿಯೆಣಿಕೆಯಂತಕ್ಕೆ–
ಗೆಲುವನೇ ಬಗೆದಾನು ಪೊರಟಿಲ್ಲ – ಅರಿತಿಹೆನ್–
ಪಾಂಡುಜರ್ ಅನುಕೂಲವಿಧಿಯುತರುವಾಗಿರ್ಕೆ–
ಪ್ರತಿಕೂಲದೈವನಾನ್ ವಿಧಿಯೊಡನೆ ಹೋರುವೆನ್
ಪುರುಷ ಬಲಮಂ ತೋರಿ ಕೊನೆಯುಸಿರನೆಳೆಯುವೆನ್
ಪೆರರ ಸೆರಗಂ ಪಾರೆ – ಪಿಡಿದ ಛಲಮಂ ಮೆರೆಸಿ
ಕಾದುವುದೆ ಎನಗಿಂದು ಉಳಿದಿರ್ಪ ಸಿರಿಗಜ್ಜ–

ಸಂಜಯ:— ತಡೆಯೆ ನಾನ್ – ಆದೊಡಂ.... ಜಗದೇಕ ವೀರರಯ್
ವರಮುಂದೆ ಹಗೆತನವ ಮಾಣ್ ದೊರೆಯೆ! ಪಾಂಡುಜರ್....

ಕೌರವ:— ಪಾಂಡುಜರ್! ಪರಿಹಾಸಮಿದು ಸಾಲು! ಕಾಡೊಳಗೆ
ಪುಟ್ಟಿ ನಾಡನು ಸೋತು ಕಾಡನಂಡಲೆದಲೆದು
ಕಂದಮೂಲವ ಭುಜಿಸಿ ಬದುಕಿದರ್ – ಕೈಪಿಡಿದ
ಸತಿಯ ಮಾನವ ಕಾಯಲರಿಯದರ್ – ಪಾರ್ಥಿವರೆ?

ಸಂಜಯ:— ಧರ್ಮನಂದನನವನ ಧರ್ಮಮಂ ನೆರೆ ನೆನೆದು
ಚಿತ್ತ ನಿರ್ಮಲನವನ ಕಡೆಸಾರುವುದುಮೊಳಿತು

ಕೌರವ:— ದಿಟ ನುಡಿದೆ! ಅರಪುತ್ರನನೃತಮಂ ಮರೆಮಾಡಿ
ಮಡಿವೆಸರ ತಾಳ್ದಿಹನ್! ನೃತವಾದಿಯೆಂತವನ್
ಗುರು ಪುತ್ರ ಬದುಕಿರಲ್ ಮಡಿದನೆಂದೊದರಿಹನ್

ಸಂಜಯ:— ಬಕ ಹಿಡಿಂಬಕ ಜರಾಸಂಧ ಕೀಚಕ ವೈರಿ–
ವೈರಿಗಜ ಪಂಚಾಸ್ಯ ವಾಯುಜನ ತೋಳ್ಬಲದೆ
ಸಿಂದಿಹಳ್ ವಿಜಯ ಸಿರಿ!

ಕೌರವ:— ಅರಿತಿಹೆನ್ ಪಾರ್ಥುನ
ಅಸುರ ನೀತಿಯು! ಬಾಣಸಿಗನವನ್ ಕದನದೊಳ್
ಕೊಲಲೊಲ್ಲದಂಗಪತಿ ಬಿಲ್ಲ ಕೊಪ್ಪಿನೊಳೆಳೆಯೆ
ಮಿಡುಕಿದನ್! ಭಗದತ್ತನಾನೆ ಬರಿಯೆಲ್ವುಡಿಯೆ
ಗೆಲಲಾರದಿಹ ಭಂಡ! ಕುರು ಬಾಲರನ್ ಕೊಲಲ್
ಗಂಡನಾದಪನೆಂತು – ಷಂಡನವ! ಪೊಗಳದಿರ್

ಸಂಜಯ:— ಶರ ವಿದ್ಯೆಯೊಳ್ ಜಗದೆ ಪೆರತೋರ್ವನಿಲ್ಲೆಂಬ
ಪೆಸರ ಗಾಂಢೀವಿಗಿದಿರಾಂಪರಾರ್?

ಕೌರವ:— ಆರ್ – ನರನೆ?
ತಪಿಪ ತಾಪಸನಾಗಿ – ಅರಿವೆಣ್ಣ ರೂಪಾಗಿ–
ನಟಿಪಲವ ತಕ್ಕವನ್ – ಶರವಿಮುಕ್ತರ ಗೆಲಿಪ–
ಗುರುವಧೆಯ ತಾನ್ ಗೈದ ಸಾಹಸಿಗ! ದಲ್ ದಿಟಂ!

ಸಂಜಯ:— ಯಮಳರ್....

ಕೌರವ:— ಗೋವಳರ್! ಎಣಿಕೆಗೊಳಪಡರ್

ಸಂಜಯ:— ಅಗ್ನಿಜೆಯು....

ಕೌರವ:— ಪತಿಗಳಯ್ವರ ಕೂಡಿ
ಪಶುವೃತ್ತಿಗೆಳಸುತಿಹ ಸತಿ ದಿಟಕು ಪತಿವೃತೆಯು!
ಬಹುಪತಿಯರಾವೃತೆಯು! ಜಗದೊಳಪರೂಪ ದಿಟ!

ಸಂಜಯ:— ಅವತಾರಿ ಪುರುಷ ಮುರವೈರಿಯಿಹ ದುರ್ಜಯನ್

ಕೌರವ:— ನರನ ತೇರೆಸೆಪ ಆ ಸೂತಾವತಾರಿಯನ್!
ಕಪಟ ಗೋಪನ ದೇವನೆಂದಪೆಯ ಸಂಜಯಾ?

ಸಂಜಯ:— ರಾಮಭಕ್ತನ್ ನರನ ಕೇತನದೆ ನೆಲಸಿಹನ್!

ಕೌರವ:— ಕಪಿಗೆ ಚಪಲತೆ ಬಹಳ ಪೇಳದೇನಚ್ಚರಿಯು!

ಸಂಜಯ:— ಮನದೊಮ್ಮೆ ಯೋಚಿಪುದು ಕುರುದೊರೆಯೆ ಪಾಂಡುಜರ್
ದುರ್ಜೇಯರಿಹರವರ ನೀನು ಜಯಿಸುವೆಯೆಂತು?

ನೀಸಬಲನಿಹೆ ಶಕ್ತರವರಶಕ್ತನು ನೀನ್

ಕೌರವ:—ಸಂಜಯಾ! ವೈರಿಗಳ ಪೊಗಳುತಲಿ ಪಿರಿದೆನಿಸಿ
ನೀನೆನ್ನ ಕಿರಿದು ಮಾಳ್ಪೆಯ್ ಬರಿದೆ – ನೆನೆಯದಿರ್....

ಸಂಜಯ:—ಬರಿದೆ ಛಲವಿಡಿಯದಿರ್ – ಪರ್ಚಾಳುವುದು ನೆಲನ

ಕೌರವ:—ಕುರುಕುಲಗೆ ಛಲ ಪಿರಿದು – ನೆಲಕಿರಿವನಲ್ತು ನಾನ್–
ಛಲಕಿರಿವೆನೀಪೊಳ್ತು – ಖಂಡಿಸಲ್ ಬಿಡೆ ನೆಲನ!
ಭೂಮಂಡಲವನಾಳುವರ್ ಆಖಂಡಿತವಿರಲ್
ಕೌರವರ್ ಅಲ್ಲದೊಡೆ ಪಾಂಡುಜರ್

ಸಂಜಯ:— ಏಕಾಂಗಿ
ನೀನಿಂದು – ಅಧಿಕ ಸಂಖ್ಯೆಯೊಳಿಹರ್ ವೈರಿಗಳ್!
ಅರಿತಿದನ್ ಯೋಚಿಪುದು

ಕೌರವ:— ಅಂತಿರ್ಕೆ – ಎನಗೆನ್ನ
ತೋಳ್‌ಬಲವೆ ನಿಜ ಬಲಂ! ಏಕಾಂಗಿಯಾನಿಂದು
ನಿಜಭುಜಗದಾದಂಡಮಂ ನೆಚ್ಚಿ ಪೊರಟಿಹೆನ್–
ಕದನದೊಳ್ ಪೆರರ ನೆರವಂ ಬಯಸಿ ಕಲಿಯು ಕಾ
ದುವನಲ್ತು

ಸಂಜಯ:— ನೀನೋರ್ವ ಕದನಮುಖನಾಗುವುದು
ಒಳಿತಲ್ತು – ಎಮ್ಮ ಪಕ್ಷದೊಳಶ್ವತ್ಥಾಮ ಕೃಪ
ರಿಹರಲ್ತೆ – ಇವರೊಳೋರ್ವಂಗೆ ನೀನ್ ಸೇನಾಧಿ
ಪಟ್ಟಮಂ ಕಟ್ಟಿ ಜಯವಧುವ ಕೆಯ್ ಮಾಡುವುದು

ಕೌರವ:—ಒಲ್ಲೆನಿದ – ಎನ್ನಿಂದ ಮೇಣೆನ್ನ ಅನುಜನಿಂ–
ಕದನಕಲಿ ರಾಧೇಯನಿಂ ಮುಡಿಯದಿಹ ಪಗೆಯು
ಪೆರಪೆರರಿನಿನ್ನೆಂತು ಮುಡಿದಪುದು ಎನ್ನ ಪಗೆ?
ಭೀಷ್ಮ ದ್ರೋಣರ ಕೈಯೊಳಾರದಿಹ ಕದನಮಿದು
ಕೃತವರ್ಮ ಕೃಪರಶ್ವತ್ಥಾಮರಿಂ ತೀರ್ದಪುದೆ!

ಗ್ರೀಯೆನಾಸೆಯನವರ - ಕರವಾಳದಂದದಲಿ
ಮರವಾಳ ಮಸೆಯುಲಕ್ಕುಮೆ ಪೇಳು ಕೂರಿತಂ!
ಕಳೆದಿಹೆನ್ ಕಳೆದ ಬಲು ಬವರದೊಳ್ ದೌರ್ಭಾಗ್ಯ!
ತನುಜ ಕೆಳೆಯುರನಿಂದು - ಎನಗಾನೆ ಸೇನಾನಿ
ಪಟ್ಟಮಂ ಕಟ್ಟಿಕೊಂಡಪೆನೆನ್ನ ಗಳಿತಾಶ್ರು
ಜಲದಿಂದಲಭಿಷೇಕಗೊಂಡಪೆನ್! ಹತಭಾಗ್ಯ!
ಭೀಮನೊಡಲಂ ಸೀಳಿಯನುಜ ದುಶ್ಶಾಸನನ
ಪೊರದೆಗೆಯದೆಂತುಳಿವೆ? ಗಾಂಢೀವಿಯುನ್ ಕೆಡಹಿ
ದಲ್ಲದೊಡೆ ರವಿಸುತನಿಗೆಂತಾತ್ಮಸುಖ ಕೊಡುವೆ?
ತಡೆಯದಿರ್ ಸಂಜಯ!

ಸಂಜಯ:— ಆದೊಡಂ ಕುರುದೇವ
ನಿನಗಾಗಿ ಹಂಬಲದೆ ಕಾದು ಕುಳಿತಿಹ ಅಂಧ
ಪಿತೃ ಮಾತೆಯರ ಕಂಡು ಅವರೆಣಿಕೆಯೆಂತಂತು
ಪರಕೆಗೊಳ್ಳುತ ಕದನಕುದ್ಯೋಗಿಪುದು ಹಿತಂ

ಕೌರವ:— ಎಂತು ಕಾಂಬೆನ್ ಎನ್ನ ಜನನಿ ಜನಕರ ಮೊಗಮ
ನೆಂತು ಪೊಗುವೆನ್ ಎನ್ನ ಶೂನ್ಯಮಾದೋಲಗವ
ಉತ್ತರಿಪೆನೆಂತಾನು ವೈಧವ್ಯದಿಂದಳುವ
ಸತಿಯರಿಗೆ - ಕಂದರನ್ ಕಳೆದ ತಾಯಂದಿರಿಗೆ-
ಕದನದೊಳ್ ಜಯವಡೆದು ವಿಜಯದುತ್ಸಾಹದಿಂ
ಬಂಧು ಜನರಂ ಮರಳಿ ಕಾಂಬಾಸೆ ಕನಸಾಯ್ತು!
ಮೊಗದೋರಲಾರೆನಾನೀ ಸ್ಥಿತಿಯೊಳವರಿಂಗೆ
ನಡೆ ಮುಂದೆ - ಮಾರ್ಗವಲಂಬನಂ ಮಾಡೆನಗೆ
ಸಂಜಯಾ!

ಸಂಜಯ:— ರಣಕಣದೆ ಬಾ ಹೀಗೆ ಕುರುಕುಲನೆ!
ಕಡಿದುರುಳಿ ಕೆಡೆದಿರ್ಪ ದಡಿಗವೆಣಗಳ ಸರಿಸಿ
ಕಾಲಸಿಡು - ರುಧಿರಪ್ರವಾಹದೊಳ್ ಕಡಿದಿರ್ಪ

ಪೊಂಪಡೆಲುಬಿನ ಗಡಣದೊಳ್ ಮಿದುಳ ಮೆಟ್ಟಿನಡೆ-
ಕುರುಕುಲನೆ ನೋಡಲ್ಲಿ! ಆಯೆಡೆಗೆ! ಕದನದೊಳ್
ಮಡಿದ ವೀರರನರಸುವಪ್ಸರಾವೃಂದಮಂ!
ಸಿಂಗರಿಸಿದಾ ವಾಯುಯಾನದೊಳ್ ವೀರರಸು
ಗಳನು ಕೊಂಡೊಯ್ವುಪರ್........

ಕೌರವ:— (ಪಕ್ಕಕ್ಕೆ ನೋಡಿ)

ಈ ದೆಸೆಯೊಳಾರದಿದು
ಖಡ್ಗ ಹತಿಯಿಂ ಛಿದ್ರಗೊಂಡಿರ್ಪ ಗಳತಾಂಗ?

ಸಂಜಯ:—ಬಿಲ್ಗೊಜನೊರಗಿಹನ್ – ದೃಷ್ಟದ್ಯುಮ್ನನ ಖಡ್ಗ
ಹತಿಗೆ ತನುವಂ ಚೆಲ್ಲಿ....

ಕೌರವ:— (ಬಳಿ ಸಾರಿ ಬಾಗಿ)

ಓ ಎನ್ನ ಗುರುದೇವ!
ನಮಿಸುವೆನ್ – ಶಿಷ್ಯ ನಾನಿಮಗಿತ್ತ ಗುರುಕಾಣ್ಕೆ!
ಅರಿಯೆನೇ? ನಿಮ್ಮ ಶೌರ್ಯಾತಿಶಯ ಗೌಣಮಂ–
ಹರಿಹರರ್ ಪೊಣರಲರಿಯರ್ – ನಿಮ್ಮ ಬಿಲ್ವಿದ್ಯೆ
ಪಡೆದಿರ್ಪ ನಾನೆ ಪಾಂಡುಜರೊಡಂ ಕಾದಿಸಿಹೆ–
ಎನ್ನ ಪಾಪಕೆ ನೋವೆನೆನ್ನ ಕತದಿಂ ನಿಮಗ
ದೀಯವಸ್ಥೆಯುದಾಯ್ತೆ ಬಿಲ್ಗೊಜ!

ಸಂಜಯ:— ದುಃಖಮಂ
ತಡೆಯೊಡೆಯ! ಬಿಜಯಗೈಯುವುದಿಲ್ಲಿ – ಒರಗಿಹನ್
ಅರಿಬಲದ ಸುಕುಮಾರ!

ಕೌರವ:— (ಮುಂದಾಗಿ ಬಾಗಿ)

ಅಭಿಮನ್ಯು! ಇದೊ ನಮಿಪೆನ್!
ಕುವರ ನಾ ನಿನಗೆ ಪಿರಿದೆನಿಸಿದೊಡಮಾಯುಷದೆ–
ಪಿರಿಯ. ಗುಣ ಶೌರ್ಯಾತಿಶಯಕೆ ನಿನ್ನನ್ ಮೆಚ್ಚಿ
ಪೊಗಳ್ವಪೆನ್! ನೀನ್ ವೈರಿ ಬಲದೊಳಿರಲೇನಾಯ್ತು?

ರಣದಿ ಕಾದಾಡಿ ನೀನ್ ವೀರ ಮರಣವ ಪಡೆದೆ-
ನಿನ್ನ ಪೆತ್ತಳ್ ತಾಯಿ ಸೌಭದ್ರೆ – ಮೊಲೆವೆತ್ತ
ವೆಣ್ಣಲ್ಲ! ವೀರ ಜನನಿಯು ಪೆಸರ ಪೊತ್ತಳಯ್!
ಜಸದೊಳಗೆ ಚಂದ್ರಕುಲತಿಲಕ ನೀನ್ ಸುಕುಮಾರ!
ನಿನ್ನ ಮಾಳ್ಕೆಯೊಳೆನಗೆ ಕದನದೊಳ್ ನಿಜ ಸಾಹ
ಸಿಕ ವೀರ ಮರಣಮಕ್ಕೆಂದು ಬೇಡುವೆನಿದೊ–!

ಸಂಜಯ:— ಇತ್ತಲಿದೊ! ಭವ ತನುಜ ಲಕ್ಷಣನ್....

ಕೌರವ:— (ಮುನ್ನಡೆದು ನೋಡಲಾರದೆ ಕುಸಿದು)

ಓ ಪುತ್ರ!
ನಿನ್ನಸಾನಾವ ಮೊಗದೊಳ್ ನೋಳ್ಪೆನೆಲೆ ಕಂದ!
ನೀನೆನಗೆ ಕುಡುವಂಜಲಿಯು ತರ್ಪಣಂ ನಿನಗ
ದಾನೆ ಕುಡುವಂತಾಯ್ತು! ಓ ಮಗನೆ! ಕಣ್ಣೀರ
ತರ್ಪಣವ ನೀಡುತಿಹೆ! ನಿನ್ನಳಿವ ನೆನೆನೆನೆದು
ದುಃಖಿಸುವ ನಿನ್ನಬ್ಬೆಗೆಂತು ತೋರ್ಪೆನ್ ಮೊಗವ?
ಎಂತೊರೆವೆನೆಲೆ ಕಂದ! ನಿನ್ನಳಿವ....

ಸಂಜಯ:— ಸೈರಿಪುದು
ಅತ್ತಲದೊ! ಯುವರಾಜ – ಭೀಮನಿಂದುರವನುಗಿ
ಸುತೆ ಭುವಿಯೊಳೊರಗಿಹನ್....

ಕೌರವ:— (ತೆವಳಿಕೊಂಡು ಬಳಿ ಸಾರಿ)

ಸಹಿಸಲಾರೆನದಯ್ಯೊ
ಓ ಅಣುಗವಮ್ಮ! ನಿನಗಾಯ್ತೆಯೊ ದುರ್ಮರಣ!
ತಾಯ ಮೊಲೆಯನ್ ಮೊದಲು ನಾನುಂಡೆ ಬಳಿಕ ನೀನ್
ಪಾಲನ್ನಮಂ ಮೊದಲ್ ನಾನುಂಡೆ ಬಳಿಕ ನೀನ್
ಕ್ರಮವಿಪರ್ಯಯವ ಮಾಡದೆಯೆನ್ನನನುಸರಿಸಿ
ಮರಣದೆಡೆಯೊಳ್ ಕ್ರಮವ ಭಂಗಗೆಯ್ದೆನ್ನುಮನ್
ಬಿಟ್ಟೆಲ್ಲ ಪೋದೆ – ಹಾ! ನಿಜ ಮಾಂಸ ಪೈಶಾಚ

ಮುಖದೊಳಿರೆ – ನಿಜ ಶಿರಂ ನಕ್ತಂಚರೀಹಸ್ತ
ದೊಳಗಿರಲ್ – ವಾಯುಜನ ಗದೆಯಿಂದ ಮಡಿದೆಯಾ?
ತಣಿದಿಲ್ಲವಾತನೆದೆ ನಿನ್ನ ರಕುತವ ಪೀರ್ದು
ದಣಿದಿಲ್ಲವಾತನೆದೆ ನಿನ್ನ ಮೈಯೊಳ್ ನಡೆದು
ನಿನಗೊದಗಿಸಿಹ ಬನ್ನಗಳೆಯಲಾತನ ಕೆಡೆದು
ಪಡಿಲ್ವಿಡಿಸುತೊಡಗುಟ್ಟ ಬರಿಯೊಲುವನುಡಿದೊಡನೆ
ಅಡಗನೊಡನೊಡನೆ ಮಾರಿಗೆ ಬಡಿಸದೆಂತುಳಿವೆ?
ಪಗೆಯ ತೀರ್ಚುತ ನಿನ್ನ ಬಗೆಗೆ ನೆಮ್ಮದಿ ಮಾಳ್ಪೆ
ನುಳಿಸಲಾರೆನ್ ಪಗೆಯ........

ಸಂಜಯ:— ಬಂಧುವೋಹದೊಳಿಂತು
ಹಲುಬದಿರ್ ಕುರುಕುಲನೆ! ಸೈರಿಪುದು–

ಕೌರವ:— (ಭ್ರಾಂತಿಗೊಂಡು ಎದ್ದು ಸುತ್ತ ನೋಡಿ)
ಸಂಜಯನೆ!
ಎಲ್ಲಿರ್ಪನೆನ್ನ ಸಖಸಂಗಾಧಿಪತಿಯೆಲ್ಲಿ?
ಪ್ರಭುವೆನದೆ – ಜೀಯೆನದೆ – ಒಡೆಯನೆನದೆನ್ನಿದಿರು
ನಡೆತರದೆಯೊಡಬರದೆ ನುಡಿಯದೇಕೆಲ್ಲಿರ್ಪ
ನೇಕೆ ಮರೆದಿರ್ಪನೋ – ರಣದಿ ಮೆಯ್ ಮರೆತನೊ!
ಮುಳಿಸಿಂದ ಮಾತುಳಿದು ಕುಳಿತಿಹನೊ ಕೆಳೆಯನವ
ಅವನ ದನಿಯೊಯೆನ್ನ ಕಿವಿದೆರೆಯ ತೆರೆಸುತಿದೆ!
ಅವನ ರೂಪವದೆನ್ನ ಕಣ್ಕದವ ತೆರೆಸುತಿದೆ!
ಅವನಸಪ್ಪುಗೆಗೊಳಲ್ ತೋಳೆನ್ನ ತೊಳಲುತಿದೆ!
ಎಲ್ಲಿಹನ್ ಸಖ ಕರ್ಣ! ಎಲ್ಲಿಹನ್! ನುಡಿವುದಕೆ
ಬಾಯ್ ಬಯಸಿ ಬಾಯಾರುತಿದೆ! ಅವನ ಸಖತನಕೆ
ಮನ ಬೆರಸಿಯೆದೆಯೆ ನೀರಾಗುತಿದೆ! ಎಲ್ಲಿಹನ್?
ಕರ್ಣನಿಲ್ಲದ ಆಟ! ಕರ್ಣನಿಲ್ಲದ ಕೂಟ!
ಕರ್ಣನಿಲ್ಲದ ರಾಜ್ಯ! ಕರ್ಣನಿಲ್ಲದ ವ್ಯಾಜ್ಯ!
ಕರ್ಣನಿಲ್ಲದ ಧರೆಯು! ಕರ್ಣನಿಲ್ಲದ ಸಭೆಯು

ಕರ್ಣನಿಲ್ಲದ ಸದನ! ಎಲ್ಲಿ ಕರ್ಣನ ವದನ!
ತೋರಿ ಕೊಡು ಸಂಜಯನೆ! ನರಗೆ ಸರಿಜೋಡಿಯಲಿ
ಸೆಣಸಿ ಕಾದಿದ ಕರ್ಣನಳಿದನೆನೆ ನಂಬೆನಿದ....

ಸಂಜಯ:—ಮನದೊಳುದ್ರೇಕಗೊಳದಿರು ಪ್ರಭುವೆ! ಅಂಗಾಧಿ
ರಾಜನದೊ! ಸಮಪಾದ ಶೋಭೆಯಲಿ ಬಲಮುಷ್ಟಿ
ಕರ್ಣಮೂಲದೊಳಿರಲ್ – ಭುವಿಗೆ ತಾರಿದ ರಥದ
ಚಕ್ರಮಂ ನೆಗಹುತಿರಲಲ್ಲೆ ನರ ಶರದಿಂದೆ
ಘಾಸಿವಡೆದನ್........

ಕೌರವ:— (ಆವೇಶದಿಂದ ಮುಂಬರಿದು)
ಇಲ್ಲ – ಕರ್ಣನದೊ! ನಗುತಿಹನ್!
ಬಿಲ್‌ಗಾರ ನರನ ಶರ ಜೋಡಣೆಯ ನೆನೆದು ಪರಿ
ಹಾಸಗೆಯ್ದಪನಲ್ಲಿ – ಸೂತಾವತಾರಿಯನ್!
ತಡೆಯದಿರ್ ಸಂಜಯನೆ! ರಾಧೇಯನಪ್ಪುಗೆಗೆ
ಮುಂಬರಿಯುವೆನ್ನುಮಂ.......

ಸಂಜಯ:— ತಾಳ್ ದೊರೆಯೆ! ಕರ್ಣನಸು
ಗಳೆದ ಒಡಲಿದು........

ಕೌರವ:— (ಕುಸಿದು ಕುಳಿತು)
ವಿಧಿಯೆ ಹಾ! ಕರ್ಣನಳಿದೆಯಾ?
ಮರು ನುಡಿಯೆಯಾ ಕೇಳೆಯನೆನ್ನೊಳಂಗಾಧಿಪತಿ!
ರಾಜ್ಯಾಭಿಲಾಷೆಯಿಂ ನಿನ್ನ ನಾನ್ ಕಾದಿಸಿದೆ
ನರನಿದಿರು – ಅಸುವೇದೆಯಾ ಸಖನೆ! ಬಸವಳಿದು
ಬಳಲಿ ಬೆಂಡಾಗಿಹೆಯ? ಮುನಿಸೇಕೆ – ಕಿಸಿಸೇಕೆ?
ನೀನ್ ನುಡಿಸದಿರಲಿನ್ನ ನುಡಿಸುವವರಾರಿಹರ್?
ನೀನ್ ನಡೆಸದಿರಲಿನ್ನ ನಡೆಸುವವರಾರಿಹರ್?
ನೀನ್ ನಗಿಸದಿರಲಿನ್ನ ನಗಿಸುವವರಾರ್? ಅನುಜ
ತನುಜರೆಡವಂದಿನ್ನ ನುಡಿಸುವರೆ? ನಗಿಸುವರೆ?

ವಸುಷೇಣ ನಿನ್ನಾತ್ಮಜಂ ಮಡಿಯೆ ಕದನದೊಳ್
ನೊಂದ ನಿನ್ನೆದೆಯ ಸಂತೈಸೆ ಬಂದಿಹೆನಿಲ್ಲಿ
ಕುವರ ಲಕ್ಷ್ಮಣನಳಿವಿಗೆನ್ನ ನೀನ್ ಸಂತೈಪು
ದಂಗಾಧಿಪತಿ! ನೀನು ಆನುಂ ಎನ್ನನುಜನುಂ
ಮೂವರೊಂದಾಗಿರ್ದೆವೆಯ್ – ಅಳಿಯಲೆನ್ನನುಜ
ಆನುನೀನೊಂದಾಗಿರ್ದೆವೆಯ್ – ಇಂದು ನೀನ್
ಎನ್ನನೋರ್ವನನೊಂದು ಮಾಡುತೆಲ್ಲಿಗೆ ನಡೆದೆ?
ನುಡಿವೆನಾರೊಡನೆ ನಾನ್ – ನಡೆವೆನಾರೊಡನೆ ನಾನ್–
ಆರೊಡನೆ ಗಜ ಹಯಮನೇರಿ ಮೆರೆವೆನ್ – ಓಲ
ಗದೊಳಿರ್ಪೆನಾರೊಡನೆ ಆರೋಗಿಸುವೆನಿನ್ನು–
ಆಳಾಗಿ ನೀನ್ ಎನಗೆ ಮೇಲಾದೆ ಮತ್ತೆನಗೆ
ಗುರುವಾಗಿ ಸಖನಾಗಿ ಮಂತ್ರಿ ಮಾಗಧನಾಗಿ–
ನೀನೆನಗೆ ಬಲಬಂಟ! ನೀನೆ ನೇಹದ ನಂಟ!
ಎಂತು ನಾನ್ ಮರೆವೆನ್ – ಕುರುಧರೆಗೆ ನೀನೊಡೆಯ
ನೆಂದರಿಯುತಿರ್ದೊಡಂ – ಕುಡಲಾರ್ತೆನಿಲ್ಲ ನಾನ್
ನಿನಗೆ ಭೂಮಂಡಲದ ಒಡೆತನವ – ಕೆಳೆಯ ನೀನ್
ಕೊಡುಗೈಯ್ಯ ದಾನಿ – ನೀನ್ ಕಡುಗಲಿಯು ಕಾಳಗದಿ–
ನಿನ್ನ ಕೊಲಲಾರಳವು? ನರನೋರ್ವ ಕೊಲಲಿಲ್ಲ
ನಿನ್ನನಿದು ದಿಟ! ಪರಶುಧರ ಚಕ್ರಧರನಿಂದ್ರ
ಭೂದೇವಿ ಕುಂತಿಗೂಡುತಲೊಡನೆ ನಿನ್ನಸುವ
ಪೀರಿದರ್ – ನಿನ್ನ ಪಿರಿಮೆಯಾದಿಂತು! ಕೆಳೆಯ ನೀನ್
ಗೆಲಿದೆನಗೆ ಕೊಟ್ಟಿರ್ಪೆ ಪರಮಂಡಲವ – ನಾನ್
ಕೊಟ್ಟಿಲ್ಲ ನಿನಗೆ ಜಲದರ್ಪಣವ – ಸಖನೆ ನೀನ್
ಸುಟ್ಟಿರ್ಪೆಯೆನ್ನ ಪಗೆವರನಿಂದು ನಾನ್ ನಿನ್ನ
ಸುಟ್ಟು ಸಂಸ್ಕರಿಸಿಲ್ಲ – ಆಯ್ತು ನಿನಗೆ ಸುಮೋಕ್ಷ
ಎನಗಾಗದೀಗ ಭಾಷ್ಪಾಂಬು ಮೋಕ್ಷಂ – ಕರ್ಣ!
ನಿನ್ನ ಸೌಧರ್ಮಿಕೆಗದಾವ ಕೂರ್ಮೆಯ ತೋರ್ಪೆ?

ಹಾ ವಿಧಿಯೆ! ತನುಜಾನುಜರ ಕೆಳೆಯು ಬಂಧುಗಳ
ಅಳಿವನುರೆ ಕಾಣಿಸಿದನೆನ್ನ ಕಣ್ಣಿಗದಾವ
ನೋಟವಂ ತೋರಿದಪೆಯೊ! ಮುಂದೆ

ಸಂಜಯ:— ಕುರುದೊರೆಯೆ!
ಜಲದಾನ ಕ್ರಿಯೆಯು ವಾಕ್ ಜಲದಿಂದೆ – ದಹನ ಕ್ರಿಯೆ
ಯಂ ಕೋಪದುರಿಯಿಂದೆ ಮಾಡಿಹೆಯ್! ಮರೆಯುವುದು–
ಮರುಗದಿರ್ ರಣಕಣದೆ ಮನವ ಛಲದೊಳ್ ನಿಲಿಸಿ
ಮುಂಬರಿಯುವುದು–

ಕೌರವ:— ಸಕಾಲದೊಳೆನ್ನನೆಚ್ಚರಿಸಿ
ಹಿತ ನುಡಿದೆ ಸಂಜಯನೆ! ಕರ್ಣ ದುಶ್ಶಾಸನರ
ಅಳಲೆನ್ನಯೆದೆ ವೀರ ಕೋಪದಾವಾನಲನ
ರೂಪದಿಂ ಪಗೆ ಪಾರ್ಥ ಭೀಮರಂ ಲಯಗೊಳಿಸ
ಲುದ್ಯುಕ್ತಮಿದೆಯಿದೊ! ಪೊರಟಿಹೆನ್ – ಎಲ್ಲಿಹನ್?
ಜನ್ಮ ಬದ್ಧದ್ವೇಷಿ ವಾಯುಜನ್! ಮುರಹರನ
ರಕ್ಷೆಯೊಳಗಿರ್ಪ ಪಾರ್ಥನನೊಮ್ಮೆ ತೋರಿಕೊಡು

ಸಂಜಯ:— ಮೆಲ್ಲನಡಿಯಿಡು ತಡೆದು ಕುರುಪತಿಯೆ! ನಿಡುಕದನ
ದೊಳ್ ಸುರಿದ ಮಿದುಳ ಕರ್ದಮದೊಳಡಿಯಿಡೆ ಜಾರಿ
ಜಗಳ್ದೂರು ಭಂಗಮಾದಪುದು ತಾಳ್!

(ಮೂರು ಮರುಳುಗಳು ವಿಕಟನೃತ್ಯದಿಂದ ಕೇಕೆ ಹಾಕುತ್ತ ಪ್ರವೇಶಿಸಿ)

೧ನೇ ಮರುಳು:— ಹ ಹ ಹಾ!

೨ನೇ ಮರುಳು:— ಹಿ ಹಿ ಹಿ! ಹಿ ಹ್ಹಿ ಹೀ!....

೩ನೇ ಮರುಳು:— ಹು ಹು ಹು! ಹು ಹ್ಹು ಹೂ!....

೧ನೇ ,, :— ಭೀಮಗದೆಯಿಂ ನಿನಗದೂರು ಭಂಗ! ಹ ಹ ಹ!

೨ನೇ ,, :— ಹಿ ಹಿ ಹಿ! ಕೌರವನೂರುಭಂಗವೀ ದಿನ! ಹೆ ಹೆ ಹೆ!

೩ನೇ ,, :— ಹೊ ಹೊ ಹೊ! ಗುರುದ್ರೋಣನಾರಕುತ ಪೀರುವೊಡೆ

೧ನೇ ಮರುಳು:—ದ್ವಿಜನವನ್! ಹಿ ಹ್ಹಿ ಹೀ! ಕುರುಜಾನುಜರ ರಕುತ
ಪೀರ್ವೆನೆ....

೩ನೇ ,, ಭೀಮನೋರ್ವನೆ ಪೀರ್ದನ್! ಹು ಹ್ಹು ಹೂ!

೨ನೇ ,, :—ಹ ಹ್ಹ ಹಾ! ಕುರುರಾಯನಿನ್ನುಮೊಳನ್....

೩ನೇ ,, :— ಹ ಹ್ಹ ಹಾ!
ಬಾಯಾರಿ ಕಾದಪೆನ್ – ಹಿ ಹ್ಹಿ ಹೀ!....

೧ನೇ ,, :— ಹೊ ಹ್ಹೊ ಹೋ!
ಹ ಹ್ಹ ಹಾ....! ಹೆ ಹ್ಹೆ ಹೇ!.... ಬಯಸಿ ನಾನ್ ಬಾತಪೆನ್

೨ನೇ ,, :—ಸವಿ ನೆತ್ತರ ಹಹಹಾ....

೩ನೇ ,, ಹಿ ಹಿ ಹಿ ಹೀ ....

೧ನೇ ,, :— ಹು ಹು ಹು ಹೂ....

ಕೌರವ:— (ವಿಸ್ಮಯದಿಂದ ಆಲಿಸಿ ಸುತ್ತ ನೋಡಿ)
ಆರಿಂತು ನುಡಿದಪರ್ !

ಸಂಜಯ:— ಮರುಳುಗಳ್ ಕುರುದೊರೆಯೆ!
ಮೈತ್ರೇಯ ಶಾಪಮಂ ಮನಕೆ ತಂದಪುವು

ಕೌರವ:—ಛೀ ಪೋಕೆ! ಮರುಳ ಮಾತಿನೊಳೇನು ಪುರುಳಿಹುದು?
ನೆನೆಯದಿರ್!

೧ನೇ ಮರುಳು:— ಹ ಹ್ಹ! ಹ ಹ ಹ ಹ ಹ ಹ ಹಾ....
ಅರಗಿನಾಲಯದೆ ವಿಷಾನ್ನದೆ ಪಾಂಡು ನಂದನರ
ಕೊಲಬಗೆದ ಕುರುರಾಯ ನೀನ್ ಮರುಳೊ?

೨ನೇ ,, :— ಹಿ ಹಿ ಹಿ ಹಿ ಹಿ....
ಭೂತಕೋಟಿಗಳ್ವೆರಸು ರಣಕಣದೊಳಹಹಹಹ
ನಲಿಯುತಿಹ ನಾವ್ ಮರುಳೊ? ಹೊಹೊಹೊಹೊಹೊ

೩ನೇ ,, :— ಮರುಳರಾರ್?
ನುಡಿದು ಪೋಗೆಯ್ ನೃಪತಿ ಹ ಹ್ಹ ಹಾ!

೧ನೇ ಮರುಳು:— ನುಡಿಯುದೆಯು
ಅಡಯಿಡಲಾ ಶಿವನಾಣೆ! ಹೆ ಹ್ಹೆ ಹೇ....

೨ನೇ ,, :— ಕಲಿಭೀಮ
ನಾಣೆಯಿಂದೆ! ತಡೆಯುಹಹ....

ಮೂರೂ ಮರುಳುಗಳು:— ಜತೆಯಾಗಿ ಅಟ್ಟಹಾಸಗೈದು)
ಹಹ್ಹ ಹಹಹಹಹಹಹ....
ಹಿಹ್ಹಿ ಹಿಹಿಹಿಹಿಹಿಹಿಹಿ....ಹುಹ್ಹು ಹುಹುಹುಹುಹುಹುಹು....
ಹೆಹ್ಹೆ ಹೆಹೆಹೆಹೆಹೆಹೆ....

ಕೌರವ:— (ಗದೆಯೆತ್ತಿ ಮುಂಬರಿದು)
ಹಾ! ಸೈರಿಸೆನ್!
ಶಿವನಾಣೆಗಾನು ತಡೆದಿರ್ದೆ – ಭೀಮನ ಪೆಸರ್ಗೆ
ತಡೆಯಲಾರೆನ್ – ಗದೆಯೊಳೊಟ್ಟೆ ಕುಟ್ಟುವೆ ಮರುಳ್
ಗಣವ....

ಸಂಜಯ:— ತಡೆಯೊಡೆಯ! ಮರುಳ್‌ಗಳ ಕೂಡೆ ಸೆಣಸದಿರ್
ನಿನ್ನ ಗದೆಯಂ ಕಂಡು ಮರುಳ್ ಭಯದೆ ಪರಿದಿಹವು
ಬಿಜಯಗೆಯ್ವುದಿತ್ತಲ್ – ಅದೊ! ನಿನ್ನ ಅಂಧ ಪಿತ
ಮಾತೆಯೊಡಗೂಡಿ ಬಂದಪನಿತ್ತ–ವಿನಯದಿಂ
ಪಿರಿಯರನ್ ಕಂಡು ಪರಕೆಯಂಗೊಳ್ಳು ಕುರುಪತಿಯೆ!

ಕೌರವ:— ಹಾ ವಿಧಿಯೆ! ಅರಿನೃಪಾಲರನಿಕ್ಕಿ ಜಯದೊಸಗೆ
ದೆಸೆದೆಸೆಗೆ ಪಸರಿಸಲ್ ಸುತ ಸೋದರಾಪ್ತರೊಡ
ಗೂಡಿ ಜನನೀ ಜನಕರನ್ ಕಾಂಬೆನೆಂಬಾಸೆ
ಗಿನಿತಾಯ್ತು! ಅಳದರಿಗೆ ಕಂಬನಿಯು ನಿಡುತಿಹರ
ನೋಳ್ಪೆನೆಂತಾನ್ ಮೊಗದೆ? ಕಂದರೆಲ್ಲಿಹರೆಂದು
ಜನನಿ ಕೇಳಲ್ – ಸೋದರರಯಿರವ ಪಿತ ಕೇಳ
ಲುತ್ತರಿಪೆ ನೆಂತಾನು....? ಪಾಂಡುಜರ ಕೈಯಿಂದ
ಮಡಿದರೆನುವೆನೆ? ಅನುಜ ದುಶ್ಯಾಸನಾ....ಕರ್ಣಾ....

(ಬಸವಳಿದು ಶೋಕದಿಂದ ಕೌರವನು ಮೂರ್ಛೆ ಹೋಗಿ ನೆಲಕ್ಕೊರಗುವನು ಸಂಜಯನು ಆತನನ್ನು ಆದರಿಸಿ ಅವನ ಶಿರವನ್ನು ತನ್ನ ತೊಡೆಯಲ್ಲಿ ಇಟ್ಟುಕೊಂಡು)

ಸಂಜಯ:—ತಾಳ್ ದೊರೆಯೆ! ಹಾ! ದುಃಖದಾವೇಗದಿಂದಿಂತು
ಹಮ್ಮಡಂ ಪೋದೆಯಾ? ಎಚ್ಚರಂಗೊಳು ದೇವ!
(ಉಪಚರಿಸುವನು)

— ತೆರೆ —

ದೃಶ್ಯ ೩

[ರಣಭೂಮಿಯ ಮತ್ತೊಂದು ಬದಿಯಿಂದ ಕುರುಡು ಧೃತರಾಷ್ಟ್ರನು ತಡವರಿಸುತ್ತಾ ಬರುವನು. ಗಾಂಧಾರಿಯು ಅವನಿಗೆ ಮಾರ್ಗದರ್ಶನವನ್ನು ಮಾಡುತ್ತಿರುವಳು]

ಧೃತರಾಷ್ಟ್ರ:— ಎಲ್ಲಿರ್ಪೆ ಹಾ! ಎನ್ನ ಸುಕುಮಾರ ಕುರುಪತಿಯೆ!
ಧುರಕೆ ಮನ ಮಾಡಿ ತನುಜಾನುಜರ ಕಳೆದಿರ್ಪೆ
ಯೇಕಾಂಗಿಯೆಲ್ಲಿರ್ಪೆ? ಸೋಲ ಸಿಗ್ಗಿಂ ಮೊಗವ
ದೋರಿಸೆಯಾ....?

ಗಾಂಧಾರಿ:— ಓಗೊಡು ಕಂದ! ನಿನ್ನಂಥ ಪಿತ
ನೃಪನರಸುತಲ್ ಬರುವನೆಲ್ಲಿರುವೆ – ಮಾತೆಯಾನ್
ಕರೆದಪೆನ್

ಸಂಜಯ:— (ಕೈಮಾಡಿ ಕರೆದು)
ಇತ್ತಲಿತ್ತಲ್ – ಪಿರಿಯ ದೊರೆಗಳಿರಾ!
ಬಿಜಯಗೆಯ್ವುದು ಮಾತೆ – ಕುರುದೊರೆಯು ತನುಜಾನು
ಜರ ವಿಯೋಗಕೆ ನೊಂದು ಮೆಯ್ಮನಂ ಮರೆತಿಹನ್

ಗಾಂಧಾರಿ:— (ಧೃತರಾಷ್ಟ್ರನೊಡನೆ ಕೌರವನ ಪಕ್ಕದಲ್ಲಿ ಕುಸಿದು)
ಹಾ ಮಗನೆ! ಕುರುಡರಾದೆಮಗೆ ನೀನ್ ಊರುಗೋ
ಲಾಗಿರ್ದೆ – ಕದನದಲಿ ಭೀಮನುರು ಗದೆ ನಿನ್ನ
ಮುರಿದುದೇಂ?

ಧೃತರಾಷ್ಟ್ರ:— ಹಾ ಕುರುಕುಲ ಚಕ್ರವರ್ತಿ! ಹಾ!
ಕಾಯ್ದುಮಾಯ್ದು ವಿಧಾತ್ರ ನಿನ್ನುಮಂ ಪರಲೋಕ
ಕಟ್ಟಿದನೆ?

ಗಾಂಧಾರಿ:— ವಿನಯ ಗುಣ ವೃಂದ ನೀನ್ – ಗುರುಜನರ

ಪರಕೆಯನು ಆದರದೆ ಪಡೆಯದೇತಕೆ ಮೋಸ
ಗೊಂಡಿರ್ಪೆ ಮಗನೆ! ನಿನಗುಚಿತಮೋ ಪೇಳ್ ಕಂದ!

ಧೃತರಾಷ್ಟ್ರ:— ನುಡಿ ಮಗನೆ! ನೀನೆಮ್ಮೊಳಿಂದು ನುಡಿಯದೆಯಿರಲ್
ಮಡಿದ ದುಶ್ಶಾಸನನ್ ನುಡಿದಪನೆ? ದುಷ್ಕರ್ಣ
ದುರ್ಮರ್ಷಣರ್ ಬಂದು ನುಡಿದಪರೆ? ನೀನ್ ಉಸಿರ
ದೇಕಿರ್ಪೆ ಸುಕುಮಾರ!

ಸಂಜಯ:— ಗುರುಜನರ್ ಸಂತೈಪು
ದಿದೊ! ದೊರೆಯು ಎಳ್ಚರುವ
(ಕೌರವನ ಕಿವಿಯ ಬಳಿ ಬಾಗಿ)
ದೊರೆಯೆ! ನಿಜ
ಜನನಿ ಜನಕರ್ ನಿನ್ನ ಬಳಿ ನಿಂದು ನುಡಿಸುವರ್

ಕೌರವ:— (ಮೂರ್ಛೆಯಿಂದ ಎದ್ದು ತಂದೆ ತಾಯಂದಿರಿಗೆ ವಂದಿಸುತ್ತ)
ಪೊಡಮಡುವೆನಿದೊ ತಂದೆ ತಾಯ್ ನಿಮಗೆ ಪಾಪಿ ನಾನ್
ಮುಟ್ಟದಿರಿಯೆನ್ನ ಪಾಳ್ತನುವ – ಕುರು ವಂಶಮಂ
ಪೇಳಪೆಸರಿಲ್ಲದೆಯೆ ನಿರ್ಮೂಲಗೊಳಿಸಿಹೆನ್–
ಎನ್ನ ಛಲದಿಂ ರಾಜ್ಯದಾಸೆಯಿಂ....

ಧೃತರಾಷ್ಟ್ರ:— (ಮೈ ಸವರಿ ಸಂತೈಸಿ)
ಕುರುಕುಲನೆ!
ನೀನುಳಿದೊಡೆಮಗೆ ಸಾಕಿಂತು ನಾನ್ ಬೇಡುವೆನ್
ಇನ್ನಾದೊಡಂ ಸಂಧಿಗೊಪ್ಪುವುದು ನೀನ್ – ಧರ್ಮ
ತನಯನೆಮ್ಮಯ ಮಾತಿಗೆರಡು ನುಡಿವವನಲ್ತು
ಸುತ ಸೋದರರ ದುಃಖಮಂ ಮರೆತು ಭೀಮನೊಳ್
ವೈರಮಂ ಮರೆ ಮಗನೆ! ಪಾಂಡವರಿಗರ್ಧ ರಾ
ಜ್ಯಮನೀವ ಮನ ಮಾಡು – ಸಂಧಿಗೊಪ್ಪುವುದು ನೀನ್–
ಸಂಜಯನನಟ್ಟಿ ಸಂಧಿಯ ನಾನೆ ಸಮಗೊಳಿಪೆನ್

ಗಾಂಧಾರಿ:—ಗುರುವಚನಮೊಪ್ಪುವುದಲಂಘನೀಯಂ ಮಗನೆ!

ಮುತ್ತ ತಾಯ್ ತಂದೆ ಕಣ್ ಕುರುಡರಾದೆಮ್ಮ ನುಡಿ
ಮೀರದಿರ್ — ಸತ್ತವರ್ ಸತ್ತುಪೋದರ್ ಮರಳಿ
ಬಂದಪರೆ? ಸಮರ ವ್ಯಾಪಾರಮಂ ಮಾಣ್ ಮಗನೆ!
ನಿಜ ಶಿಬಿರದತ್ತ ಬಿಜಯಂಗೈಯುವುದು ನೀನ್
ಉಳ್ಕೊಡೆಮಗದೆ ಸಾಲು....

ಸಂಜಯ:— (ತಡೆದು)
ಕೋದಿಸಲ್ ಬೇಡರಸಿ!
ಪತಿ ಸುತರನೊಡನಂತೆ ಸಂತೈಸುವುದನುಳಿದು
ನೀನಳಲ್ ಪೆರರಾರು ಸಂತೈಪರ್?

ಧೃತರಾಷ್ಟ್ರ:— ಎಲೆ ಮಗನೆ!
ವೀರ ಶತ ಜನನಿ ಪೆಸರಾಂತ ನಿನ್ನೀ ಜನನಿ
ದುಃಖ ಶತ ಜನನಿ ಪೆಸರಾಂತಳಯ್! ಯೋಚಿಪುದು—
ಧರ್ಮನಂದನ ಸಂಧಿಗೆಂದು ಮನ ಮಾಡಿಹನ್—
ತನ್ನನುಜರೊಳಗೋರ್ವ ಕದನದೊಳ್ ಮಡಿಯಲ್ಕೆ
ತನ್ನಸುವ ನೀಗಿಸುವೆನೆಂದಾಣೆಯಿಟ್ಟಿಹನ್—
ಯುಕ್ತಮಿದು ಒಪ್ಪುಗೊಳ್....

ಕೌರವ:— (ಆಕ್ಷೇಪಿಸುತ್ತಾ)
ಸಂಧಿಯಂ ನುಡಿಯದಿಂ!
ಧರ್ಮಜನ್ ತನ್ನನುಜನನ್ ಕಳೆಯೆ ಸಾವನ
ಪ್ರಣನೆಸಲ್ ನಾನಲ್ತೆ ಮಾನಿಸನ್? ತ್ರಡೆವೆನೆಂ
ತಳಿಯೆ ಶತ ಸೋದರರ್! ಎನಗೆ ಮಾನಸ ವಾಳೆ?
ಬಿಡಿಮೆನ್ನ ಸಾಧಿಸುವೆ ಫಲುಗುಣನ ಬಸಿರಿಂದೆ
ಕರ್ಣನನ್ ಪೊರದೆಗೆವೆ — ಭೀಮನುದರದಿ ತೆಗೆವೆ
ನನುಜ ದುಶ್ಶಾಸನನ — ಸಂತ್ರವಿಡುವೆನ್ ನಿಮ್ಮ
ನಂತಾಗದೊಡಮೆನ್ನ ಮಾತಾಪಿತರೆ! ನೀವ್
ಮರೆಯುವುದು — ನಾನೆಂತು ಮಗನಹೆನೊ ಧರ್ಮಜನ್
ಮಗನಹನು ನಿಮಗೆ ಅಳಿಯಲ್ಕಾನು ರಣದೋಳಗೆ—

ಪಾಂಡುಜರನೊಡಗೊಂಡು ಬಾಳುವುದು – ನೂರ್ವರನ್
ಐವರೊಳ್ ಕಂಡು ಮರೆಯುವುದೆಮ್ಮ ಬೇಡುವೆನ್ –
ಪರಸುವುದು ಯುದ್ಧ ಮುಖನಾದಪೆನ್

ಧೃತರಾಷ್ಟ್ರ:— (ನಿರಾಶೆಯಿಂದ ತುಸು ಯೋಚಿಸಿ)

ಆದೊಡಂ....

ಕುವರ ನೀನ್ ನುಡಿಯನೊಪ್ಪುವುದು ಮರೆಯದೆ ಕದನ
ಮುಖನಾಗುವಾ ಮೊದಲ್ – ಸರಳಮಂಚದೊಳೊರಗಿ
ಚಿಂತನೆಯೊಳಿರ್ಪ ಭೀಷ್ಮನ ಕಂಡು ಪೋಗುವುದು
ಅವರ ನುಡಿಯಂತೆ ನಡೆವುದು

ಕೌರವ:— ಹಸಾದಂ – ಅಂತೆ

ನಡೆಯುವೆನ್ – ನೀವ್ ಶಿಬಿರದತ್ತ ನಡೆವುದು ಮರಳಿ–
ಸಂಜಯನೆ! ನೀನೆನ್ನ ಭೀಷ್ಮನೆಡೆ ನಡೆಸುವುದು–
ಪೊಡಮಟ್ಟು ಪೋದಪೆನ್

(ಬಾಗಿವಂದಿಸಿ ಸಂಜಯನನ್ನು ಮುಂದಿಟ್ಟುಕೊಂಡು ಕೌರವನು ತೆರಳುವನು)

ಗಾಂಧಾರಿ:— (ಹೋಗುತ್ತಿರುವ ಮಗನೆಡೆಗೆ ನೋಡಿ)

ನಲ್ಗುವರ!

ಧೃತರಾಷ್ಟ್ರ:— (ಕೈಯೆತ್ತಿ)

ಗೆಲ್ ಮಗನೆ!

— ತೆರೆ —

ದೃಶ್ಯ ೪

[ರಣರಂಗದ ಒಂದು ಪಾರ್ಶ್ವದಲ್ಲಿ ಶರಳಮಂಚದ ಭೀಷ್ಮರಿರುವರು. ಸಂಜಯನ ಮಾರ್ಗದರ್ಶನದಿಂದ ಕೌರವನು ಪ್ರವೇಶಿಸುವನು]

ಸಂಜಯ:—ಇರುವುದೆಯ್ ದೊರೆಯೆ! ಇಭಶೈಲಗಳನೇರಿ–
ರುಧಿರ ಸ್ರೋತವ ದಾಂಟಿ – ನಡೆನಡೆದು ದಣಿದಿಹೆಯ್!

ಕೌರವ:—ನಡೆ ಮುಂದೆ ಸಂಜಯ! ನಡೆದು ದಣಿದಿಹೆನಿಲ್ಲ
ನಾನಿಂದು – ಸಂಧಿಯಂ ನಡೆಸವೇಳ್ಕೆಂಬ ನುಡಿ
ಯಿಂ ಕಿವಿಯೊಳಡಿಗಡಿಗೆ ಕೇಳ್ಕೆ ನೊಂದಪೆನ್!
ಏಕಿಂತು ಎನ್ನೆದೆಯ ಕಣ್ಣ ಕುರುಡಾಗಿಸಿಹ
ಬಿದಿಗಿವಿಯು ಕಿವುಡಾಗಿಸಿಲ್ಲ! ಸಂಧಿಯ ಮಾತ
ನಾಲಿಸಲ್ಕಾರೆನ್! ತೋರಿಗೊಡು ಮುತ್ತಯ್ಯ
ನಿಹನೆಲ್ಲಿ....

ಸಂಜಯ:— ನೋಡಲ್ಲಿ! ಪರಮ ಯೋಗಿಯ ತೆರಂ!
ನರ ಶರಗಳಿಂದೆ ತನುಜರ್ಝರಿಸಲಾ ನೋವ
ನರಿಯದೆಯೆ ಶರಳ ಮಂಚದೊಳೊರಗಿ ಪರಮಾತ್ಮ
ನೇಕ ಚಿಂತನೆಯೊಡಂ ಭಾರತದ ಕಥನ ಕ್ರಮ
ವನು ಯೋಚಿಸುತಲಿರ್ಪ ಭೀಷ್ಮನನ್ – ತಡೆಯೆಂದೆಯ!
ಬಿನ್ನವಿಪೆನವನಿಂಗೆ ನಿನ್ನ ಬರಮಂ ನಾನ್–
(ಭೀಷ್ಮರ ಬಳಿ ಸಾರಿ, ಕಿವಿಯ ಬಳಿ ಬಾಗಿ)
ಕುರುಕುಲ ಪಿತಾಮಹನೆ! ಅವಧರಿಪುದಿತ್ತ ನೀನ್ –
ನಿನ್ನೆಡೆಗೆ ಸಾರುತಿಹ ಕುರುಕುಲಕ್ಷ್ಮಾಪಾಲ....
(ಕೌರವನು ಭೀಷ್ಮರ ಬಳಿ ಸಾರಿ ಬಾಗಿ ವಂದಿಸಿ)

ಕೌರವ:—ಪ್ರೊಡಮಡುವೆನಿದೊ ಅಜ್ಜ! ಛಲದೊಳಾನ್ ಕಾದಿಸಿಹೆ
ನಿನ್ನನೀ ಹರಯದೊಳ್ ಪರನೊಡನೆ – ಹಿತ ನುಡಿಯ

ನಾಲಿಸದೆ ಭೀಮು ವೈರಕೆ ನಿನ್ನ ನೋಯಿಸಿಹೆ
ನೆನ್ನ ಪಾಪಕೆ ನೋಯುವೆನ್

ಭೀಷ್ಮ:— (ತಲೆಯೆತ್ತಿ ಕೈ ನೀಡಿ)

ಆರ್ – ಕುರುಪತಿಯೆ!
ಭಾರತಕದನ ಮಧ್ಯದೊಳ್ ಬಂದೆಯಾ? ಬಾ ಮಗನೆ!
ಎಲ್ಲಿಹವು ನಿನ್ನ ಧವಳೋಂಪ್ರ ಗಜ್ಜ ಚಾಮರಂ?
ಎಲ್ಲಿಹವು ವಂದಿ ಮಾಗಧ ಸೇನೆ? ಪಟುಭಟರ್!
ಎಲ್ಲಿ ತನುಜಾನುಜರ್? .ಬಂಧುರದೆ ಮಂಗಲ
ಧ್ವನಿಗಳಿಲ್ಲದೆ ದೇಸಿಗನ ತೆರದೆ ಬಂದೆಯಾ!

ಕೌರವ:—ನೋಯದಿರ್ ಅಜ್ಜ! ನೀನೆನ್ನ ಪಾಪಕೆ ನೊಂದು

ಭೀಷ್ಮ:— (ಮೈಸವರಿ ಸಂತೈಸುತ್ತಾ)

ಮರುಗದಿರ್ ಮೊಮ್ಮ ನೀನ್! ಇನ್ನಾದೊಡಂ ಪಾಂಡು
ನಂದನರ ಕೂಡುತಲಿ ವೈರಮಂ ಮರೆ ಮಗನೆ!
ಭರತ ವಂಶದೊಳಿಂದುವರೆಗೆ ನಡೆದಿಹುದಿಲ್ಲ
ಗೋತ್ರ ಕಲಹಂ ನಿಮ್ಮೊಳಾದುದಿದ ಮರೆಯುವುದು
ಧರ್ಮನಂದನನನಾನೊಪ್ಪಿಪೆನ್ – ಪೂರ್ವಕ್ರಮ
ದಿಂದಾಳುವುದು ನೆಲನ – ಸಂಧಿಯನ್ನೊಪ್ಪುಗೊಳ್–

ಕೌರವ:—ಸಂಧಿಯೇನಜ್ಜ! ನುಡಿಯದಿರಿಂತು ನಾನ್ ನಿನಗೆ
ಪೊಡಮಟ್ಟುಪೋಪ ಕಜ್ಜದೆ ಬಂದೆನಹಿತರೊಳ್
ಸಂಧಿಯಂ ಸಮಗೊಳಿಸಲಲ್ತು ಬಂದಿಹೆನಜ್ಜ!
ಸಮರದೊಳಗೆನಗಾವುದದು ಕಜ್ಜ! ನೆಲಕಿರಿವೆ
ನೆಂದು ಬಗೆದಿಯದಿರಿಂತು–ಛಲಕಿರಿವೆ ನಾನಿಂದು!
ಕದನದೊಳ್ ಸಂದವರ ಮರೆತು ಮಾಡಲ್ ಸಂಧಿ
ಕಂಡವರು ನಗರೆ ಹಾ! ರೋಡಿಸನೆ ವಾಯುಜನ್?
ಪಾಂಡುಜರ್ ಬೇಡಲಾನಿತ್ತಿಲ್ಲ ರಾಜ್ಯಾರ್ಧ
ವಿನ್ನೆಂತು ನಾನವರ ಕೂಡೆ ಬೇಡುವೆನಜ್ಜ!

ಸಲ್ಲದಿದು ಎನ್ನನುಜನನ್ ಕೊಂದ ಭೀಮನನ್-
ಕೆಳೆಯು ಕರ್ಣನಕೊಂದ ಪಾರ್ಥನನ್ ಮುರಿದಿಕ್ಕಿ
ಮಿಕ್ಕವರ ಕೂಡಿಬಾಳುವುದೆನಲ್ ಮೀರೆನದ-
(ಮನೋ ನಿರ್ಧಾರವನ್ನು ಪುನಃ ಬಿಗಿವಿಡಿದು)
ಆಗದುಂ ಪುದುವಾಳಲೆಂತು ಮಾಗದುಮವರೊ
ಳಜ್ಜ! ಸಂಧಾನವುಂ ಮಾಡಲಾಗದು ನೀನು
ಬಿಲ್ಲಗುರುಗಳ್ತಾವುಯಿಲ್ಲದಿರೆ—ಕರ್ಣದು
ಶ್ಯಾಸನರುಯಿಲ್ಲದಿರಲಾರರೊಡಂ ರಾಜ್ಯಮುಂ
ಆಳುವೆನ್? ಸಂಪದವ ತೋರ್ವನಾರಿಗೆ ಮೆರೆವೆ
ನಾಪಿನೋದಂಗಳಂ! ಭಂಡಮಿದು! ಧರ್ಮು ಸಂ
ಪದವನೊಲ್ಲೆನ್ ಪಿಡಿವೆನಭಿಮಾನ ಖಂಡಿತಂ!
ಪುಟ್ಟಿಹೆನ್ ನೂರ್ವರೊಡ ಸತ್ತರೆನ್ನನುಜರುಂ
ಸತ್ತ್ರಾಡೇನ್ ಪುಟ್ಟಿರೇ? ಸಾವುದಕೆ ಬೆದರೆ ನಾನ್
ಅಜ್ಜ! ಪಾಂಡವರೊಳಿಂದಾನು ಛಲಮುಂ ಮೆರೆವೆನ್

ಭೀಷ್ಮ:— (ಸಂಜಯನೊಡನೆ)
ಜತುಗೇಹ ಬೀಜ–ವಿಷವನ್ನ ಬೀಜಾಂಕುರಂ-
ದ್ಯೂತ ಪಲ್ಲವ ಚಯುಂ – ಕೇಶಾಗ್ರಹಂ ಪುಷ್ಪ
ವಾಗಿ ಬೆಳೆದಿಹ ವೈರ ಫಲವಿಡದೆ ಪೋಕುಮೆ?
ಮೊಮ್ಮನಿವ ಸಂಧಿಯೊಪ್ಪುವನಲ್ಲನೆಂದಿಂತು
ಅಂಧನೃಪಸಿಂಗಾನು ಒರೆದೆನೆಂದೊರೆಯುವುದು
ಸಂಜಯಾ!

ಕೌರವ:— (ತಲೆಯೆತ್ತಿ)
ಪೋಗು! ಪಿತರಿಗೆ ವಾರ್ತೆಯನ್ನರುಹು
ಎನ್ನ ಕಜ್ಜಕೆಯಜ್ಜನಾಜ್ಞೆಯುಂ ಪಡೆದಾನು
ಪೊರಡುವೆನ್

ಸಂಜಯ:— ಆಜ್ಞೆಯಂತಾನು ಪೋದಪೆನೀಗ
(ಸಂಜಯನು ಹೋಗುವನು)

ಕೌರವ:—ಬೆಸಕೆಯ್ವನಜ್ಜ! ನಾನ್ ಸಂಧಿಕಾರ್ಯಕೆ ನಿನ್ನ
ಮಾತನುಲ್ಲಂಘಿಸಿಹ ದೋಷಮೆನಗಾಗದೋಲ್
ಪರಸುವುದು–ಜಯಮು ದೈವಾಯತ್ತ–ಕುರುಕುಲಕೆ
ನಡೆವೆನಕಳಂಕ ರೀತಿಯೊಳಂತು ಶೌರ್ಯದಿಂ

ಭೀಷ್ಮ:—ಮೆಚ್ಚಿಹೆನ್ ಕಂದ! ನಿನ್ನಯ ಸತ್ವದುನ್ನತಿಗೆ!
ಏಕಾಂಗಿ ವೀರ ನೀನಹುದು ಛಲದಂಕನಿಹೆ
ಆದೊಡಂ.... 'ಅಶುಭಸ್ಯ ಕಾಲಹರಣಂ' ಎಂಬ
ನುಡಿಯಂತೆ ಕಾಲವಂಚನೆ ಮಾಳ್ಪುದೊಳ್ಳಿತಿದು–
ತೀರ್ಥಯಾತ್ರೆಗೆ ಪೋದ ಹಲಧರನ್ ಮತ್ತಂತೆ
ಕೃತವರ್ಮ ಕೃಪರಶ್ವತ್ಥಾಮರಿವರುಂ ಬಳಿಗೆ
ಬರ್ಪನ್ನೆವರೆಗೆ ನೀನ್ ಜಲದೊಳಗೆ ಮೈಗರೆದು
ಬಾಳುವುದು

(ಕೌರವನನ್ನು ಬಳಿಗೆ ಕರೆದು ಅವನ ಕಿವಿಯಲ್ಲಿ ಉಸುರಿ)

. ಇಂತಿದುಂ....ಜಲಮಂತ್ರವುಪದೇಶಿ
ಸಿಹೆ ಪೋಗು! ಕುರುಭೂಮಿಯುತ್ತರದೊಳಿಹ ಸರೋ
ವರ ವೈಶಂಪಾಯನದೆ ಇಂದಿನಿರುಳಂ ಕಳೆಯು–
ಬೆಳಗಾಗಲದು ನಾಳೆ ನಿನ್ನವರ ಕೂಡುತಲಿ
ಕದನ ಗೈವುದುಮುಚಿತ

ಕೌರವ:— (ವಂದಿಸಿ)

ಪೋಪೆನಂತೆ–ಹಸಾದ–
ಪೊಡಮಟ್ಟು ಪೊರಟೆನಿದೊ ಪರಸುವುದು

ಭೀಷ್ಮ:— (ಕೈಯೆತ್ತಿ)

ಗೆಲವಕ್ಕೆ

(ಕೌರವನು ಹೋಗುವನು)

— ತೆರೆ —

ದೃಶ್ಯ ೫

[ವೈಶಂಪಾಯನ ಸರೋವರದ ದಂಡೆ—ಕೌರವನು ಪ್ರವೇಶಿಸುವನು. ಕ್ಷಣ ಹೊತ್ತು ಸರೋವರದ ಕಡೆಗೆ ದಿಟ್ಟಿಸಿ-ನಿಟ್ಟುಸಿರಿಟ್ಟು.]

ಕೌರವ:—ಓ ವಿಧಿಯೆ! ಓ ಸರೋನಿಧಿಯೆ! ನಿವುಗಾನಿಂತು
ಪಗೆಯಾದೆ! ವಿಧಿಯೊಡನೆ ಹೋರಾಡ ಪೊರಟವನ್
ಕಲಿಯಾನು ವೈರಿಗಳಿಗಂಜುತೆಂತೌ ಪುಗುವೆ
ನೀ ಸರೋವರವ? ಶೋಕಾಬ್ಧಿಯೆನಗಳಿದವರ
ನೆನೆಹು! ಅದರೊಳ್ ಮುಳುಗಿ ಮಿಂದಿಹೆನ್– ಈ ಜಲಧಿ
ಪುಗಲೆಂತು? ಎನ್ನ ಕೀರ್ತಿಯನಿದರ ಪಂಕದೊಳ
ಗದ್ದುವೆನೆ? ತೆರೆಗಳದೊ! ಕುರುರಾಯ ಬಳಿ ಸಾಠ
ವೇಡೆಂದು ತೆರೆಗೈಯನಾಡಿಪವು! ನೀರ್ ಪಕ್ಕಿ
ಪುಗಲಾನು ಕೊಳದೋರಿಪೆಂದು ಸೇರ್ದುವು ನಭವ!
ಕೊಳವೆನ್ನ ಕೀಳ್ವೆಸೆಗೆ ಕಿಲಕಿಲನೆ ನಗುತಿಹುದು!
ಜಲನಿಧಿಯು ಪಗೆಯೆನಗೆ! ಜಡ ಜೀವ ಚರ ಪ್ರಕೃತಿ
ವಿಧಿಯೊಡನೆ ಪಗೆಯೆನಗೆ!

(ಭ್ರಾಂತಿಯಾವೇಗದಿಂದ)

ಪಗೆಯ ಸಾಧಿಪೆನೆಂತು?
ಪಗೆಗಳನ್ ಕೊನೆಗೊಳಿಸೆ ಜಲವ ಪುಗುವೆನ್ ಪಗೆಯು
ಪೊರಮುಡಲಿ–

(ಗದೆಯೆತ್ತಿ ಹಿಡಿದು)

ಎಲ್ಲಿಹರ್ ಭೀಮಾರ್ಜುನರ್ ಬರಲಿ!
ವಿಧಿ ಬರಲಿ! ಎಲ್ಲಿಹನ್ ಭೀಮಸೇನನ್ ಬರಲಿ!

(ಸರೋವರವನ್ನು ಹೊಗುವನು)

— ತೆರೆ —

ದೃಶ್ಯ ೬

[ರಣಭೂಮಿಯಲ್ಲಿ ಭೀಮಸೇನನು ಗದೆಯನ್ನೆತ್ತಿ ಬೀಸುತ್ತಾ ಅಬ್ಬರದಿಂದ ಚಡಪಡಿಸುತ್ತಿರುವನು]

ಭೀಮ:—ಎಲ್ಲಿಹನ್! ಎಲ್ಲಿಹನ್! ಎಲ್ಲಿಹನ್! ಎಲ್ಲಿಹನ್!
ಎಲ್ಲಿಹನ್? ಕುರುವಂಶವಿಲಯಕೇತುವದೆಲ್ಲಿ
ವೈಗರೆದನೆನ್ನ ಪೂಣ್ಕೆಯಿಂದು ತೀರ್ಚಿಲ್ಲ–
ಅಗ್ನಿಜೆಯ ವೇಣಿ ಸಂಹಾರವಾಗಿಹುದಿಲ್ಲ–
ತೊದಳಾದಪುದುಮೆನ್ನ ಭೀಮಪೂಣ್ಕೆಯದೆಲ್ಲಿ
ಕೆಡೆದಸಿಭದೊಡಲೊಳಗೆಯಡಗಿಹನೆ ಕೌರವನ್?
ಒಡೆದು ನೋಡುವೆನೆಲ್ಲಿ? ಮಿದುಳ ಕರ್ದಮದೊಳಗೆ
ಹುದುಗಿಹನೆ ವೊದೆದು ನೋಡುವೆನೆಲ್ಲಿ? ರಕುತದಾ
ಮಡುವಿನೊಳಗಡಗಿಹನೆ? ಪುಡುಕಿ ನೋಡುವೆನೆಲ್ಲಿ?
ಎಲುಬುಗಳ ರಾಶಿಯೊಳ್ ತಲೆಗರೆದನೇಂ ಪಾಪಿ
ಶೋಧಿಸುವೆನೆಲ್ಲಿ ನಲ್ವತ್ತೆಂಟು ಗಾವುದಂ
ಪರಿಮಾಣ ಕುರುಭೂಮಿಯೊಳಗಿಲ್ಲವೇನ್ ಗೈವೆನ್?

(ಆಲಿಸಿ – ನೋಡಿ)

ಕಿವಿಯನಿಡೆ ನುಡಿವ ದನಿಯಿಹುದಿಲ್ಲ ಕೌರವನ
ಅಡಿಪಜ್ಜೆಯಿಹುದಿಲ್ಲ – ಅಡಗಿಹನ್ ಎಲ್ಲಿ ಪಗೆ?
ಬಿಟ್ಟಪೆನೆ? ಪಗೆಗೆ ರಕ್ಷೆಯನಿತ್ತನಾವನವ?
ಹರಿಹರರ್ ಬ್ರಹ್ಮಾದಿ ದೇವಗಣಮುಂ ಸದೆವೆ!
ಕುಡಿಯುವೆನ್ ಸಾಗರವ! ನಡುಗಿಸುವೆ ಕುಲಗಿರಿಯ!
ದೆಸೆದೆಸೆಯನೊಡೆವೆ – ಬಾನನು ಬಿರಿವೆ – ಮೇರುಗಿರಿ
ಯಂ ಮುರಿವೆ – ಎತ್ತುವೆನ್ ಮಂದರವ – ಒತ್ತುವೆನ್
ಈ ನೆಲನ – ಬೆಂಬತ್ತುವೆನ್ ದಿಶಾಗಜಗಳನ್–

ಹಗೆಯು ಸತ್ತ್ರಗೆಯೊಲ್ಲಿ? ಎಲ್ಲಿಹನ್ ಹಿಂಬೇಡಿ
ರಣಗಳಿದನೋ? ಅವ ದೆಸೆಯೊಳುಳಿದನೊ? ಮಾತೆ
ಗಾಂಧಾರಿಯುದರವಂ ಮರಳಿ ಪುಗಿ ಬಿಡಲಾರೆ–
ಅಲಿಪುದು ಭೂದೇವಿ! ಕೇಳುವುದು ಜಲಧಿ! ಸೀ
ನಲಿ ಅಗ್ನಿ ಗೋಲವೆ! ಬಾಂಬಯಲಿ! ಮಾರುತನೆ!
ಕೇಳುವುದು ಪಂಚ ಭೂತಂಗಳಿಂದುಂ ಹಗೆಯು
ಕೊಂದೆನ್ನ ಕೋಪಕಾಹುತಿ ನಾಳ್ಪೆಯಲ್ಲದೊಡೆ
ಆನಗ್ನಿಗಾಹುತಿಯಾದಾಗಿ ಬೀಳ್ವೆನ್ ಪೂರ್ಣ್ಕೆ!
ಎಲ್ಲಿಹನ್ ಜತುಗೇಹದೊಳ್ ಸುಡಲ್ ಬಗೆದವನ್?
ಊರು ದ್ವಂದ್ವಂಗಳಂ ನುಗ್ಗುನುರಿ ಮಾಡುವೆನ್–
ಎಲ್ಲಿಹನ್ ವಿಷವಿಕ್ಕಿ ಕೊಲಲು ಬಗೆದಿಹ ಪಾಪಿ?
ಬಾಹುಯುಗಳವ ತತ್ತರಿಯುತಲಿ ಚೆಲ್ಲುವೆನ್–
ಎಲ್ಲಿಹನ್ ದ್ರೌಪದಿಯ ಪರಿಭವಿಸಿದಾ ದ್ರೋಹಿ–
ಪಿಂಗಾಕ್ಷನಾ ವಕ್ಷಸ್ಥಳವ ಪೋಳುವೆ ಗದೆಯೊ
ಳೆಲ್ಲಿಹನ್! ದ್ಯೂತದಾಟದ ಶಕುನಿ ಸಂಯುಕ್ತ
ಒಡೆಯುವೆನ್ ಮುಕುಟವಂ ಪುಡಿಯೊಳಗೆ ಪೊರಳಿಸುತ
ಪೋದಪೆನ್ ಪುಡುಕುತ್ತಲಿ – ಅಂಧನೃಪ ಗಾಂಧಾರಿ
ಶಿಬಿರದೆಡೆಯಡಗಿಹನೊ – ನಡೆದಪೆನ್ – ಎಲ್ಲಿಹನ್?

(ಭೀಮನು ಹೊರಡಲು ಕೃಷ್ಣನು ಪ್ರವೇಶಿಸಿ ತಡೆದು)

ಕೃಷ್ಣ:—ಏನ್ ಮರುಳ್ತನ ಭೀಮ? ಕೋಪದುದ್ವೇಗದೊಳ್
ಕದನವಂ ಮರೆತಿಂತು ಗೊಣಗುತಿಹೆ – ಹಗೆಯುವನ
ಪುಡುಕವೆಲೆ ಭ್ರಮೆಪಿಡಿದು ತಿರುಗುತಿಹೆ – ಸೊಗಸಾಯ್ತು

ಭೀಮ::—ತೆಗಳದಿರ್ – ನೀನೆನ್ನ ನುಡಿಸದಿರ್ – ತೆರಳುವುದು–
ಇಂದೊಂದು ದಿನ ನೀನು ಗುರುವಲ್ಲ! ನಿನಗಾನು
ಶಿಷ್ಯನಹನಲ್ಲ! ಕುರುಕುಲವನಳಿಸಿದಪೆ

ಕೃಷ್ಣ:—ಹಗೆಯುವನಯಿರಪರಿಕಿಸಲಾಗಿಂದು ಕೌರವನ

ಕೈಗೆ ಸಾಚದೆಯಿರಲ್ ನಾಳೆಯುವ ದುರ್ಜೇಯ!

ಭೀಮ:—ತೋರಿಗೊಡು ಪಗೆವನನ್ — ಮುಕ್ಕುವೆನ್ ಅವನಸುವ

ಕೃಷ್ಣ:—ತಕ್ಕುದಿದು ತೋರಿದಪೆ ವೈರಿಯನ್....

ಭೀಮ:— (ಉದ್ವೇಗದಲ್ಲಿ)

ಎಲ್ಲಿಹನ್?

ಕೃಷ್ಣ:—ಸರಸಿ ವೈಶಂಪಾಯದೊಳ್ ಅಡಗಿಹನ್....

ಭೀಮ:— ಪಾಪಿ!

ಹೀರುವೆನ್ ಆ ಕೊಳದ ಜಲದೊಡನೆ ಅವನಸುವ

ಹೀರುವೆನ್ – ತಡೆಯದಿರ್

ಕೃಷ್ಣ:— (ಹೊರಡುತ್ತಾ)

ನಡೆ ಭೀಮ ಆಯೆಡೆಗೆ

ಪೋಗುವಂ – ಯಮಸೂನು ಪಾರ್ಥ ಯಮಳರ ಕೂಡಿ

ದಡಕೆ ಐತಂದಪನ್

ಭೀಮ:— (ಮುಂದಡಿಯಿಟ್ಟು)

ನಡೆ ಕೃಷ್ಣ! ತಡೆಯದಿರ್

(ಹೋಗುವರು)

— ತೆರೆ —

ದೃಶ್ಯ ೭

[ಧರ್ಮರಾಯನು ಅರ್ಜುನ ನಕುಲ ಸಹದೇವರೊಂದಿಗೆ ವೈಶಂಪಾಯ
ಸರೋವರದ ದಡದಲ್ಲಿ ನಿಂತಿರುವನು]

ಧರ್ಮರಾಯ:— (ತುಸು ಹೊತ್ತು ಸಿಟ್ಟಿನಿ ಕರುಣೆಯಿಂದ)

ಕೊಳದೊಳೇತಕೆಯಡಗಿ ಕುಳಿತಿರ್ಪೆ ಕುರುಪತಿಯೆ?
ಕ್ಷಾತ್ರ ಧರ್ಮಕೆ ಕುಂದು ನೆನೆಯದಿರ್! ಭರತ ಕುಲ
ದಿತಿಹಾಸದೊಳ್ ಸಹೋದರರೊಳಗೆ ಕಲಹವಿದು
ಮಾಗಿಲ್ಲವೆಮ್ಮಿಂದ ಮೊದಲಾಯ್ತು! ನೀನೆಮ್ಮ
ಕಾಡಿದೆಯ್ ಬದ್ಧ ಮತ್ಸರದಿಂದಕಾರಣದೆ
ಕದನಕಸುವಾಗಿ ಕಳೆಗೊಂಡಿಹೆಯ್ ಸೋದರರ
ಸಾವ್ಮೆದಿದ್ದೆಯಿಾಗ! ನಷ್ಟ ಸೋದರರಾಯ್ತು
ಎನಗುಂ ಸ್ವಗೋತ್ರವಧೆಯುಪ್ಪ ಪಾತಕವಿಂದು
ದೊರೆಕೊಂಡಿತಿದು - ಕಳೆದುದನು ನೆನೆಯು ಬೇಡೀಗ
ಸಂಧಿಗೊಡಂಬಡು ಸಹೋದರ ಕೊಳನ ಪೊಕ್ಕಿರ್ಪು
ದೇನ್ ತಕ್ಕುದೇ ನಿನಗೆ — ಕರೆದಪೆನ್

ಅರ್ಜುನ:— (ಮುಂದೆ ಬಂದು)

ಕೌರವಾ!

ಮಾನಧನನೆನಿಸಿ ನಿನ್ನಭಿಮಾನಕ್ಷತಿಯುಮಂ
ಮಾಡಿದೆಯ್! ನೀರೊಳಗೆ ಕಪ್ಪೆ ಮೀನಸಡಿರ್ಪ
ಗಂಡರಿರ್ಪರೆ? ಪೊರಟುಯೆನ್ನ ಶರಕಿದಿರಾಗು

ನಕುಲ:— (ಮುಂದಡಿಯಿಟ್ಟು)

ಕುರುವಂಶ ಶಶಾಂಕ! ನಿನ್ನೀ ನೆಗಳ್ದ ಯಶಃಪಂಕ
ಮಂ ಸರೋವರ ಪಂಕದೊಳದ್ದುವರೆ ಕೊಳನ
ಬಿಟ್ಟೇಳು! ವಾಯುಜನೆನ್ನಾಡಿ ನಿನ್ನ ಕಾದಲ್ಕೆ

ಯೆನ್ನ ಕೊಂತದ ಸವಿಯು ತೋರಿದಪೆ – ಕೊಳನ ಬಿಡು

ಸಹದೇವ:— (ಮುಂಬರಿದು)

ನರನೋಳಿರಿವರೆ ನೀನು ತಕ್ಕನಲ್ಲಯ್ ನೃಪತಿ!
ಸಹದೇವ ನಿನಗೆ ನಾನೇ ಸಾಲ್ವೆ ಪೊರಗೆ ಬಾ!
ನೀರ ಸವಿಯಂ ಸವಿದ ನೀನೀಗ ನೋಡಿದಪೆ
ಯೆನ್ನ ಬಾಳಿನ ಸವಿಯು ನೋಡಿದೊ! ತೋರ್ವೆನಾನ್

(ಭೀಮ ಕೃಷ್ಣರು ಪ್ರವೇಶಿಸುವರು — ಭೀಮನು ಬಿರುಗಾಳಿಯಂತೆ ಮುಂದಾಗಿ ಅಬ್ಬರಿಸುತ್ತಾ)

ಭೀಮ:—ಎಲ್ಲಿಹನ್ ಪಾಂಡುಜರ ಜನ್ಮಬದ್ಧ ದ್ವೇಷಿ?
ಕೊಳದೊಳಡಗಿಹನೆ ಈ ಬೂತು ನಿಮ್ಮಯ ನುಡಿಗೆ
ಪೊರಮಡುವನಲ್ಲವೆನ್ನಯ ಸರಂ ಕೇಳಿದೊಡೆ
ಪೊರಮಡುವ ದಿಟ – ಕರೆವೆನ್

(ದನಿ ಮಾಡಿ)

ಕೌರವಾ! ಬಾ ಪೊರಗೆ
ಬಂದೆನಿದೊ ನಿನ್ನ ಬದ್ಧ ದ್ವೇಷಿ – ಕುರುಕುಲಕೆ
ವಿಲಯಕೇತುವು ಬಂದಿಹೆನ್ – ನಿನ್ನ ಅನುಜ ದು
ಶ್ಶಾಸನನನರುಣಜಲಮಂ ಪೀರ್ದೆನಿನ್ನು ಈ
ಕೊಳದ ಜಲಮಂ ಪೀರ್ದು ನಿನ್ನ ನೆತ್ತರ ಸವಿಯು
ನೋಡಿದಪೆ – ಮರಳಿ ನೀನೆನ್ನ ಸ್ವರಮಂ ಕೇಳಿ
ಎನ್ನುಗ್ರ ರೂಪಮಂ ನೋಡಿ ಸಮರಾಕರವ
ಬಿಟ್ಟು ಕಮಲಾಕರವ ಸೇರಿ ಬದುಕಲ್ ಬಗೆದು
ಬಾಳ್ದಪೆಯಾ? ಕೊಳದಿ ಮೀನಾಗಿ ನಿನ್ನಯ ಪೆಸರಿ
ಗಿಂತು ಲಜ್ಜೆಯು ತೋರ್ದೆ – ನಿನ್ನಳವ ಸುಡು! ಸತ್ತೊ
ಡೇನ್ ಪುಟ್ಟರೇ? ಮರಳಿ ಕೈದುಗೊಳ್ ಕುರುಪತಿಯೆ!
ಎಲ್ಲಿಹುದು ಹರಿಯ ಸಂಧಾನಗೆಡಿಸಿಹ ಹಮ್ಮು?
ಎಲ್ಲಿಹುದು ದ್ರುಪದಜೆಯ ಕೇಶಾಂಬರಾಕೃಷ್ಟಿ?

ಈಂತಾರದೊಳಗೆನ್ನು ತಿರುಗಿಸಿಹ ಸೊಕ್ಕೆಲ್ಲಿ
ಅಡಗಿಹುದು ತೋರು ಬಾ! ಬಂದಿಹೆನ್ ಭೀಮನು
ದ್ದಾಮ ಭೀಮನ್! ಸಿಂಹನಾದವುಂ ಗೈದಪೆನ್

(ಮಹಾಸ್ಫೋಟನಗೊಂಡಂತೆ ಕೌರವನು ಕೊಳದ ಮಧ್ಯದಿಂದ ಎದ್ದು ಬಂ
ಗದೆಯನ್ನು ತೂಗಿ)

ಕೌರವ:--ಆರೆನ್ನ ಪೆಸರ್ವಿಡಿದನೆಲ್ಲಿಹನ್? ಭೀಮ....

ಭೀಮ:— (ಮುಂಬರಿದು)

ನಾನ್
ಇಲ್ಲಿಹೆನ್ – ನಿನ್ನನುಜನರುಣ ಜಲಮುಂ ಪೀರ್ದು
ಬೆನ್ನ ಬಿಡದೆಯೆ ನಿನ್ನನರಸಿ ಬಂದಿಹ ಗಂಡು
ಗಲಿ ಭೀಮನಿಲ್ಲಿಹನ್!

ಕೌರವ:— ಛೀ ಷಂಡ! ನಿನ್ನನಾರ್
ಗಂಡು ಮಾಡಿದರಿಂತು? ನಿನ್ನ ಕೆಯ್ ಪಿಡಿದವಳ
ಮುಡಿಯನೆಳೆಯಲ್ ಸಭೆಯೊಳೆನ್ನನುಜ ದುಶ್ಶಾಸ
ನನ್ ನಿನ್ನ ಗಂಡಗರ್ವಮುಂಮೆಲ್ಲಿಯಡಗಿತ್ತು?
ಕಾನನದೆ ತಿರುಗುತಲಿ ಕಂದಮೂಲವ ತಿಂದ
ನಿನಗಿಂತು ಗಂಡುತನಮೇನ್ ಬಟ್ಟ ಬಾಣಸಿಗ!
ಪುಟ್ಟು ಸಟ್ಟುವಿಗಡಿದು ಅಟ್ಟುಂಡು ಬಂದೆಯಾ?
ಗದೆಗೊಂಡು ಒಟ್ಟಿಯಿಪ ಶಕ್ತಿಯೆಂತುಟು ನಿನಗೆ–
ಎಸರಿಟ್ಟು ಅಕ್ಕಿಗಚ್ಚುವ ಬೆಸನ ವೈರಾಟ
ನೃಪನ ಬಾಣಸಿಗಂಗೆ ತಕ್ಕುದಿದು – ನಿನಗೆ ಯೀ
ಗದೆಯನಾರಿತ್ತರೆಲವೋ ಷಂಡೆ!

ಭೀಮ:— ಗಳಹದಿರ್!
ಪಿರಿಯಣ್ಣನರವ ಕಾಯಲ್ಕೆ ನಾನ್ ಪೆರರಿಂಗೆ
ಬಾಣಸಿಗನಾಗಿಪ್ಪೆನ್ – ಇಂದೀಗ ನಿನ್ನ ತನು
ಮಾಂಸದೊಳ್ ಮುಸುಳುಗಳಗೌತಣವನಿಕ್ಕುವೆನ್

ಅರಗಿನಾಲಯ, ವಿಷಾನ್ನವು ಜೂಜು ವಸ್ತ್ರಾಪ
ಹರಣದಿಂ ಪಾಂಡುಜರ ಲಯಗೊಳಿಸಲೆತ್ನಿಸಿಹೆ
ಗತಕಾಲವಾಯ್ತು ಲಯಕಾಲವೆಂದರಿತುಕೊಳ್
ಕೌರವಾ....! ನಿನಗಿಂದು ಅಂತ್ಯ ಕಾಲಂ ಗಡಾ....!

ಕೌರವ:— (ಗದೆಯನ್ನು ಎತ್ತಿ ಹಿಡಿದು)
ಸನ್ನದ್ಧನಾಗಿಹೆನ್! ಕೈದುಗೊಳ್ವುದುಯೆಲ್ಲಿ?
ಯಮಳರಿರಲಲ್ಲಿ ಕಿರಿಯರ್ – ಪಾರ್ಥನೇನ್ ಬರಲಿ
ಯಮಸೂನುವೈತರಲಿ – ಭೀಮನೀನಿದಿರಾಗು!
ಮುರವೈರಿ! ಪಾಂಡುಜರನೈವರನ್ ಕೂಡಿ ಬಾ!
ಸಮರಕನುವಾಗಿಹೆನ್

ಧರ್ಮರಾಯ:— (ತಡೆದು ಸಂತೈಸಿ)
ಸಮರವಾಗದು ಮಹೀ
ಮಂಡಲವ ನೀನಾಳು ಕುರುಕುಲನೆ! ನಮ್ಮೊಳಿಹ
ವಿದ್ವೇಷಮಂ ಮರೆತು ನಮ್ಮಯೈವರನು ನಿನ್ನ
ಆಳ್ವಿಕೆಗೆ ವಹಿಸಿಗೊಳ್ – ಮನದೊಳೊಪ್ಪಂದೋರು
ಕದನ ವಿಶ್ರಾಂತಿಯಾಗಲ್ ಬಗೆವೆನೊಪ್ಪುಗೊಳ್

ಕೃಷ್ಣ:— (ವ್ಯಂಗವಾಗಿ)
ದೋಷಮಲ್ತಿದು ಕೌರವನೆ ಧರ್ಮಜನ ನುಡಿಯು–
ಸಕಲ ವಸುಮತಿಗೊಡೆಯನಾಗಿ ಬಾಳ್ವುದು ತೋಷ

ಭೀಮ:— ಸಂಧಿಯೊಳ್ ಐದು ಬಾಡವನೀಯದಭಿಮಾನಿ
ಸಂಧಿ ಮುರಿದಿಹನಿಂದು ತನುಜಾನುಜರ್ ನುಡಿಯೆ
ಸಂಧಿಯುಂ ಮಾಡುವನೆ!

ಕೌರವ:— (ಸಮರ್ಥಿಸಿ)
ದಿಟ ನುಡಿದ ವಾಯುಜನ್!
ರವಿಸುತನ ನೇರ್ಪಿಂಗೆ ನರನ ಕೊಲುವೆನ್ ಮತ್ತೆ
ಅನುಜನಾ ನೇರ್ಪಿಂಗೆ ಭೀಮನುರಮಂ ಉಗಿವೆ

ಕೃಷ್ಣನಭಿಮತವಿರ್ಕೆ! ಸಂಧಿಯನ್ ಲಂಘಿಸಿಹೆ—
ಮಧ್ಯಸ್ಥನಾಗಿ ನೀನ್ ನುಡಿಯುದಿರ್ ಮುರವೈರಿ!
ಯದುಕುಲಾಂಬುಧಿಯೊಳಗೆ ಬಲದೇವನೊಡನೆ ನೀ
ನವುದೊರ್ಡನೆ ಸಂಜು ಪುಟ್ಟುವ ರೀತಿ ಪುಟ್ಟಿದೆಯ್
ಗುಣಿಯಿಹನ್ ಬಲಭದ್ರ – ನಿರ್ಗುಣಿಯು ನೀನಿಹೆಯ್

(ಪಕ್ಕಕ್ಕೆ ನೋಡಿ ಸಂತೋಷದಿಂದ)

ಅದೊ ಅಲ್ಲಿ ಬರುತಿರ್ಪನೆನ್ನ ಸೈಪಿನ ಬಿತ್ತು!

(ಮುಂದಾಗಿ)

ಬಂದೆಯಾ ಬಲದೇವ? ತಂದೆಯಿದೊ ಪ್ರೊಡಮಣುವಿ

(ಬಲರಾಮನು ಪ್ರವೇಶಿಸಲು ಕೌರವನು ಮೊದಲಾಗಿ ವಂದಿಸುವನು ಕೃಷ್ಣನೂ ಪಾಂಡವರೊಂದಿಗೆ ವಂದಿಸುವನು. ಆಶ್ಚರ್ಯ ಸಂಶಯ ದೃಷ್ಟಿಯಿಂದ ನೋಡಿ ಬಲರಾಮನು ಕೌರವನನ್ನು ಮಾತ್ರ ಹರಸಿ ಹಿಡಿದೆತ್ತುವನು)

ಬಲರಾಮ:—ಎದ್ದೇಳು ಕುರುರಾಯ!

(ಕೃಷ್ಣನೊಡನೆ ನಿಷ್ಠುರನಾಗಿ)

ಏನಿದಾಟವ ಗೈದೆ
ಯೆಲೆ ಕೃಷ್ಣ? ಕುಹಕದಿಂ ಕುರುಕುಲನೊಳೇನನಾ
ಲೋಚಿಸಿಹೆ? ಏಕಾಂಗಿ ದೇಶಿಗನ ತೆರದೊಳಿಹ
ಕೌರವನ ಬಗೆಗೇನನೊಡ್ಡಿಹೆಯ್?

ಕೃಷ್ಣ:— (ವಿನಯದಿಂದ)

ಅಗ್ರಜಾ!
ಪಾಂಡುಜರ ಪರಮಾಗಿ ನಾನೈದು ಬಾಡಮಂ
ಬೇಡಲೊಪ್ಪಿದನಿಲ್ಲ ಸಂಧಿಯಲಿ – ಮೀರಿದನ್
ಸಿಂಧು ಸುತ ಧೃತರಾಷ್ಟ್ರರೆಂದ ನುಡಿಯಿಂದು ತಾನ್
ಏಕಾಂಗಿ ನಿಂದಿಹನ್! ಅನ್ಯಾಯವೆನಗಿಲ್ಲ—
ನೀನೆ ಕೇಳುವುದವನನೆನಗ್ನಡಿಯು ಕೌರವನ್!

ಕೌರವ:—ಏಕೆ ಮುನಿವಹೆ ಬಲನೆ? ನಿರ್ಗೋಹಿ ಪಾಂಡುಜರ್

ನಾನೆನ್ನ ಪಾಪಕೃತದಿಂದನುಜ ತನುಜರನ್
ಬಂಧು ಗುರುಜನರ ಕಳೆದೆನ್ – ಮುಂದೆ ಸಂಧಿಯುನ್
ದುಃಖದೊಳ್ ಸೈರಿಸೆನ್ – ಸಮರಕನುವಾಗಿರ್ಪೆ
ಬರ್ಕೆ ಪಗೆವರ್....

ಬಲರಾಮ:— ಇರ್ಕೆ – ಪಾಂಡುಜರೊಳೋರ್ವನುಂ
ಬಂದು ಕೌರವನೊಡನೆ ಕಾದುವುದು – ಗೆಲಲು ಕುರು
ಪಾಲನವನನ್ ನಾಲ್ವರೋಲೈಸಿ ಬಾಳುವುದು

ಭೀಮ:— (ಗದೆಯನ್ನೆತ್ತಿ ಮುಂದೆ ಬಂದು)
ಪುಟ್ಟು ಪಗೆಯವನೆನ್ನ ಜತೆಗೆ ಪೋಣರಲಿ ಗದೆಯ
ಕೈಗೊಳಲಿ – ಪಗೆಗೆ ಮೊದಲಿಗ ನಾನೆ ಕೈಪೊಡೆವೆನ್
ಮುರಹರನೆ ನೀನ್ ಸಾಕ್ಷಿ

ಕೌರವ:— (ಮುಂದಾಗಿ ನಿಂತು)
ಬಲದೇವ! ನೀನೆನಗೆ
ಸಾಕ್ಷಿ – ನೀವಿರ್ವರುಂ ಧರ್ಮಯುದ್ಧಕೆ ಸಾಕ್ಷಿ!
ಭೀಮ ಬಾ! ಕೈಯ ಪೊಯ್ಯೆಮ್ಮಯ ಗದಾಹವವ
ನೋಡಿ ತಣಿಯಲಿ ಬಾನ ಬಾಗಿಲಲಿ ದೇವಗಣ!

ಭೀಮ:— (ಇದಿರಾಗಿ ನಿಂತು ಕೈ ಹೊಡೆದು)
ಕೈಯ ಪೊಯ್ದಿಹೆನಿದೋ! ಗದೆಯಗೊಳ್ ಅಂತಂತೆ

(ನುಡಿಗೊಂದೊಂದರಂತೆ ಗದೆಯನ್ನು ಬೀಸಿ ಪರಸ್ಪರ ಬಡೆದು ಸುತ್ತಿ ಕಾದುವರು)

ಕೌರವ:—ಇದೊ! ಕರಿಯ ನುಂಗಿ ಕಳಿಂಗನ ನೊಣೆದ ದರ್ಪಕ್ಕೆ!

ಭೀಮ:—ಇದೊ! ತೀರಿಸಿಹೆ ಅರಗಿನಾಲಯದ ದಾಹಮುಂ!

ಕೌರವ:—ನೆನೆ ಭೀಮ ಮತ್ಸಹೋದರರ ತಿಂದಿಹೆಯೆಂತು!

ಭೀಮ:—ವಿಷಮ ವಿಷದನ್ನವಿಕ್ಕಿದ ಪಾಪ ಮರೆಯದಿರ್!

ಕೌರವ:—ದುಶ್ಶಾಸನನ ರಕುತಮುಂ ಕಾರುವುದು ಇದೋ!

ಭೀಮಃ—ಕೃತಕ ಜೂಜಿನ ಕುಹಕತನವಿದೋ ತಾಳಿಕೊಳ್-

ಕೌರವ:—ಕುರುಬಾಲರನ್ ತಿಂದ ಪಗೆತನಕೆ ಪೊಡೆದೆನಿದೊ!

ಭೀಮಃ – ದ್ರುಪದಜೆಯ ಕೇಶಾಂಬರಾಕೃಷ್ಟಿ ನೆನೆದೆನಿದೊ!

(ವೇಗವಾಗಿ ವೃತ್ತಾಕಾರವಾಗಿ ಸುತ್ತುತ್ತಾ)

ಕೌರವ:—ಇದೊ ಪೊಯ್ವೆ ತೋಳ್ಗಳಂ!

ಭೀಮಃ— ಇದೊ ಪೊಯ್ವೆ ಕಾಲ್ಗಳಂ

ಕೌರವ:—ಉರಕಿಡುವೆ....

ಭೀಮಃ— ಶಿರಕಿಡುವೆ....

ಕೌರವ:— ನೆತ್ತಿಯಂ....

ಭೀಮಃ— ಕತ್ತುಮಂ....

ಕೌರವ:—ಅಂಬರದೆ ಜಿಗಿದು ಗದೆಯಂ ತಿರುಪುವೆನ್ – ಸಹಿಸು

(ಕೌರವನು ಅಂಬರತಳದಲ್ಲಿ ಗದೆಯನ್ನು ತಿರುಗಿಸಲು ಭೀಮನು ತಲೆತಿರು[ಗಿ]
ದಂತಾಗಿ ಬಿದ್ದು ಮೂರ್ಛೆ ಹೋಗುವನು. ಅರ್ಜುನ ನಕುಲ ಸಹದೇವರು
ಆಯುಧ ಹಿಡಿದು ಮುಂದಾಗುವಲ್ಲಿ ಕೃಷ್ಣನು ತಡೆಯುವನು)

ಕೃಷ್ಣ:—ಗಾಂಡೀವಿಯನು ಪಿಡಿಯದಿರ್ ನರನೆ! ಯಮಳರಿರ
ಮುಳಿದು ಮುಂಬರಿಯದಿರಿ - ಧರ್ಮತನಯನೆ ಶಿರವ
ಬಾಗದಿರ್! ವಾಯುಜನ್ ಮೂರ್ಛೆವೋಗಿಹನವನ್
ಎಚ್ಚರಂಗೊಳುವನರೆ ಗಳಿಗೆಯೊಳ್

ಕೌರವ:— (ಬಿದ್ದ ಭೀಮನನ್ನು ನೋಡುತ್ತಾ)

ಬಿದ್ದವನ
ನಿರಿಯೆ ನಾನ್ – ಭೀಮಂಗೆ ಗದೆಯು ಗಾಳಿಯ ತೀಡಿ
ಯೆಚ್ಚರಿಪೆ – ಗಾಳಿ ತೀಡುವೆನಿದೋ! ಎಚ್ಚರಂ
ಗೊಳು ಭೀಮ!

[ಕೌರವನು ಗದೆಯಿಂದ ಗಾಳಿ ಬೀಸುವನು]

ಕೃಷ್ಣ:— (ಭೀಮಸೇಳುವ ಸನ್ನೆಯನ್ನು ತಿಳಿದು)
ಭೀಮಸೇಳ್ದನ್! ಅದೊ! ಕೌರವನ್....

(ಕೃಷ್ಣನು ಮಾತು ಮುಗಿಸುವಷ್ಟರೊಳಗೆ ಭೀಮನು ಗದೆವಿಡಿದು ರಭಸದಿಂದೆದ್ದು ಯುದ್ಧಸನ್ನದ್ಧನಿರದ ಕೌರವನ ತೊಡೆಗೆ ಗುರಿಯಿಟ್ಟು ಹೊಡೆಯುವನು. ಕೌರವನು ತೊಡೆಯುಡಿದು ನೆಲಕ್ಕುರುಳಲು ಕೋಪಾವೇಶದಿಂದ ಆತನ ಮಕುಟವೊದೆಯುವ ಭೀಮನನ್ನು ಎಲ್ಲರೂ ತಡೆಯಲು ಹೋಗುವರು)

ಕೃಷ್ಣ:—ಹಾ ಭೀಮನೇನ್ ಗೈದೆ! ತೊಡೆಯನುಡಿದೆಯು ಪಗೆಯು
ಗೆಲುವ ಕ್ರಮವಿಂತೆ? ಹಾ! ಒದೆಯದಿರ್ ಮಕುಟಮಂ-
ಕುರುರಾಜಲಕ್ಷ್ಮಿಗಿಂತೀ ಮಾನಭಂಗ ಮಾಣ್!

ಧರ್ಮರಾಯ:—ಛೀ! ರಾಕ್ಷಸೀವೃತ್ತಿ ತಡೆಯನುಜ – ಪುಡಿಯೊಳಗೆ
ಪೊರಳ್ಚದಿರ್.

ಬಲರಾಮ:— (ಕೋಪಿಸಿ ಮುಂಬರಿದು)
ತಡೆ ಭೀಮ! ಧರ್ಮ ಭಂಗಂ ಗೈದೆ
ಸಹಿಸೆ ನಾನ್ – ಕೈದುಗೊಳ್ ಹೆಲವನೆತ್ತಿಹೆನಿದೊ!

ಕೃಷ್ಣ:— (ಬಲರಾಮನಿಗೆ ಇದಿರು ಬಂದು ತಡೆದು ಸಂತೈಸಿ)
ಅಗ್ರಜಾ! ಪಾಂಡುಜರ ಮೇಲೆ ನೀನ್ ಕೃಪೆದೋರು
ವಿಧಿವಶದೆ ಕುರುಕುಲನಿಗಿನಿತಾಯ್ತು – ಮರೆಯುವುದು-
ಅಳಿದವರ್ ಅಳಿದರುಳಿದವರ ನಾವ್ ಬಾಳ್ವುದು-
ಪುಣ್ಯ ಯಾತ್ರೆಯ ಮುಗಿಸಿ ಬಂದವನ್ ನೀನಿರ್ಪೆ
ಯುದ್ಧಮಾಗದು ನಡೆಯುವುದು ಬೀಡಿನೆಡೆಗೆ ಮನ
ಶಾಂತಿಯಲಿ

ಬಲರಾಮ:— (ಸಿಟ್ಟನ್ನುಳಿದು)
ನಿಲ್ಲಲಾರೆನ್ – ಇಲ್ಲಿ ಕೌರವನ
ಪಂಭವವ ನೋಡಲಾರೆನ್ – ಪೋಪೆ – ಹಾ ವಿಧಿಯೆ!
ದುರ್ವಿಧಿಯೆ! ಭಾರತದೆ ಧರ್ಮಯುದ್ಧಂ ಗೈದೆ!

(ನಿಡುಸುಯ್ದು ಹೊರಟುಹೋಗುವನು)

ಕೃಷ್ಣ:—ಬಲದೇವ ತೆರಳಿದನ್ – ಕುರುದೊರೆಯು ತೊಡೆಯುಡಿದು
ಕೆಡೆದಿಹನ್ – ಭೀಮನೇತಕೆ ಮರೆತು ನಿಂತಿಹೆಯು?
ಪೂಣ್ಕೆಯಂ ತೀರ್ಚಿ ಮಕುಟೋರುಭಂಗದ ವಾರ್ತೆ
ಯರಿತ ಪಾಂಚಾಲಿ ಪೊರಬಂದಪಳ್ ಕರೆಸವಳ

ಭೀಮ:—ಪಾಂಚಾಲಿ.... ಬಾ ಪೊರಗೆ – ನಮೆಯುದಿರ್ ಬೀಡೊಳಗೆ
ಬಿಡುಗೊದಲಿನ ಸುವತಿ ತಪಿಸದಿರ್ – ಮಕುಟೋರು
ಭಂಗಮಂ ಗೈದು ತೀರ್ಚಿಹೆ ಪೂಣ್ಕೆ – ಪಗೆ ಮಾಡಿದ
ನೆನ್ನ ಕೈಯಿಂ ನಿನ್ನ ವೇಣಿ ಸಂಹಾರಮಂ
ಮಾಡಿದಪೆ ಕುರುಕುಲ ಪ್ರಳಯಾಗ್ನಿಯೊಸಗೆಗೊಳ್

ಕೃಷ್ಣ:— (ಪಕ್ಕಕ್ಕೆ ನೋಡಿ)
ಅದೊ! ತಂಗೆ ಬಂದಪಳ್ – ಈಯೆಡೆಗೆ – ಬಾ ಕೃಷ್ಣೆ!
ಕಳೆದ ಬನ್ನವ ಮರೆತು ಪೂ ಮುಡಿಯೆ ಬಾರಿಲ್ಲಿ
ಭೀಮಗದೆಯಂ ಒಸಗೆಯೊಳ್ ಪೂಜಿಸುವವಿಲ್ಲಿ

(ಎಲ್ಲರೂ ಪಕ್ಕಕ್ಕೆ ತಿರುಗಿ ದ್ರೌಪದಿಯು ಬರವನ್ನು ನೋಡುವರು)

— ತೆರೆ —

|| ಇತಿ ಶಂ ||

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಒಪ್ಪು
೧	೧೪	ಕುರಬಲ	ಕುರುಬಲ
೮	೬	ಪೊಗಳಿದಿರ್	ಪೊಗಳದಿರ್
೧೩	೪	ವಾತನೆದೆ	ವಾತನಡಿ
೧೩	೬	ಪಡಿಲ್ವಿಡಿಸು	ಪಡಲ್ವಿಡಿಸು
೧೫	೧೯	ಕರ್ಣನಿಲ್ಲಿದ	ಕರ್ಣನಿಲ್ಲದ
೧೭	೧೫	ಚಕ್ರಧಿರ	ಚಕ್ರಧರ
೧೮	೨	ಅಡಯಿಡಲಾ	ಅಡಿಯಿಡಲಾ
೨೧	೧	ಮೋಸ	ಮೋನ
೩೩	೯	ಅವರ	ಅವನ
೨೬	೮	ಲಾರರೊಡಂ	ಲಾರೊಡಂ
೩೨	೨೨	ಪಂಕದೊಳದ್ದುದರೆ	ಪಂಕತೊಳಗದ್ದುವರೆ
೩೪	೧೮	ಸಟ್ಟುವಿಗಡದು	ಸಟ್ಟುಗವಿಡಿದು
೩೮	೧೫	ಯುವಳರಿರ	ಯುಮುಳರಿರ
೩೯	೧೫	ಹೆಲವನೆತ್ತಿಹೆ	ಹಲವನೆತ್ತಿಹೆ